# “ಶ್ರೀ ವಿಜಯೀಂದ್ರ ತೀರ್ಥರು”



ಶ್ರೀ ವಿಜಯೀಂದ್ರತೀರ್ಥರ ಮೂಲ ಬೃಂದಾವನ, ಕುಂಭಕೋಣ



| | |
|---|---|
| ಕಾಲ | ಕ್ರಿ ಶ **1517 – 1614** |
| ಜನ್ಮ ನಾಮ | ಶ್ರೀವಿಠಲಾಚಾರ್ಯರು |
| ಆಶ್ರಮ ನಾಮ | ಶ್ರೀ ವಿಷ್ಣುತೀರ್ಥರು **1525-26** |
| ೨ನೇ ಆಶ್ರಮ ನಾಮ | ಶ್ರೀ ವಿಜಯೀಂದ್ರತೀರ್ಥರು **1530** |
| ಅಂಕಿತ | ವಿಜಯೀಂದ್ರರಾಮ |
| ಆಶ್ರಮಗುರುಗಳು | ಶ್ರೀವ್ಯಾಸರಾಜರು |
| ವಿದ್ಯಾಗುರುಗಳು | ಶ್ರೀ ವ್ಯಾಸರಾಜರು |
| ದಂಡ ಬದಲಾವಣೆ | ಶ್ರೀಸುರೇಂದ್ರತೀರ್ಥರಿಂದ **1530** |
| ಇವರ ಉತ್ತರಾಧಿಕಾರಿ | ಶ್ರೀ ಸುಧೀಂದ್ರತೀರ್ಥರು |
| ವೃಂದಾವನ | ಕುಂಭಕೋಣ |
| ಪುಣ್ಯತಿಥಿ | ಜ್ಯೇಷ್ಠ ಬಹುಳ ತ್ರಯೋದಶಿ |
| ಮಹಾಸಂಸ್ಥಾನಾಧಿಪತ್ಯಕಾಲ | **1575-1614** |
| ಕುಂಭಕೋಣದಲ್ಲಿ ವಿದ್ಯಾಪೀಠ ಸ್ಥಾಪನೆ | **1550** |

# “ವಿ”ಕಾರ ವಿಷ್ಣುತೀರ್ಥರು :

ಜನ್ಮನಾಮ – ವಿಠಲಾಚಾರ್ಯರು

ಆಶ್ರಮನಾಮ – ವಿಷ್ಣುತೀರ್ಥರು

ದಂಡಬದಲಾವಣೆ ನಾಮ – ವಿಜಯೀಂದ್ರತೀರ್ಥರು

**ಭಕ್ತಾನಾವ್ ಮಾನಸಾಂಭೋಜಭಾನವೇ ಕಾಮಧೇನವೇ ।**
**ನಮತಾಂ ಕಲ್ಪತರವೇ ಜಯೀಂದ್ರಗುರವೇ ನಮ: ॥**

(ಚರಮ ಶ್ಲೋಕ)

**ಭಕ್ತರ ಮನಸ್ಸೆಂಬ ಕಮಲಗಳನ್ನು ಅರಳಿಸುವ ಸೂರ್ಯ–ನಂತಿರುವ, ನಮಿಸುವವರಿಗೆ ಕಾಮಧೇನುವೂ, ಕಲ್ಪವೃಕ್ಷವೂ ಆದ ವಿಜಯೀಂದ್ರತೀರ್ಥರಿಗೆ ನಮನಗಳು.**

**ಪದವಾಕ್ಯಪ್ರಮಾಣಜ್ಞಾನ್ ಸೌಶೀಲ್ಯಾದ್ಯ ಪಶೋಭಿತಾನ್ ।**
**ವಿಜಯೀಂದ್ರಯತೀಂದ್ರಾಖ್ಯಾನ್ ಸೇವೇ ವಿದ್ಯಾಗುರೂನ್ ಮಮ॥**

**(ಶ್ರೀ ಕಂಬಾಲೂರು ರಾಮಚಂದ್ರತೀರ್ಥರು)**

**ಚತು:ಷಷ್ಠಿಕಲಾವಿದ್ಯಾಜುಷೇ ವಿದ್ವನ್ಮಹೋಮುಷೇ ।**
**ಜಯೀಂದ್ರಜ್ಯೋತಿಷೇ ಕುರ್ಯಾಂ ವಂದನಾನಿ ಯಶೋಜುಷೇ॥**

**(ರಾಘವೇಂದ್ರವಿಜಯ)**

**ಸ್ವದರ್ಶನೋಕ್ತದೂಷಣಂ ನಿರಾಕರಿಷ್ಣುರಂಜಸಾ ।**
**ಆಯೀಂದ್ರಯೋಗಿರೂಪತೋವತೀರ್ಣ ಏಷ ಪೂರ್ಣಧೀ:॥**

**(ಅಪ್ಪಯ್ಯದೀಕ್ಷಿತರು, ಅಧ್ವೈತ ಮತದ ಪ್ರಸಿದ್ಧ ಪಂಡಿತರು, ವಿಜಯೀಂದ್ರರೊಂದಿಗೆ ವಾಗ್ವಾದದಲ್ಲಿ ಸೋತಾಗ)**

**“ಚಾತುರ್ಯೈಕಾಕೃತಿರ್ಯಶ್ಚತುರಧಿಕ ಶತಗ್ರಂಥರತ್ನಪ್ರಣೇತಾ**
**ಧೂತಾರಾತಿಪ್ರಬಂಧಸ್ಸ್ಫುಟವಿದಿತ ಚತು:ಷಷ್ಠಿ ವಿದ್ಯಾವಿಶೇಷ: ।**
**ಸೋಽಯಂನಶ್ರೀ ಸುರೇಂದ್ರವ್ರತಿವ್ರತನಯೋಽದ್ವೈತಶೈವಾಸಹಿಷ್ಣು:**
**ಪುಷ್ಣಾತು ಶ್ರೀಜಯೀಂದ್ರ ಸ್ತ್ರಿಭುವನವಿದಿತಸ್ಸರ್ವತಂತ್ರಸ್ವತಂತ್ರ: ॥**
**ಶ್ರೀಗುರುಗುಣಸ್ತವನಂ – ವಾದೀಂದ್ರತೀರ್ಥರು**

**ಚತುರರೂ, ನೂರನಾಲ್ಕು ಗ್ರಂಥಕರ್ತರೂ, ಸ್ವತಂತ್ರಪ್ರಬಂಧಪ್ರವರಗಳನ್ನು ರಚಿಸಿದವರೂ, ಪರವಾದಿ ಗ್ರಂಥಗಳನ್ನು ನಿರಾಕರಿಸಿದವರೂ, ಚತು:ಷಷ್ಠಿಕಲೆಗಳಲ್ಲಿ ಪ್ರವೀಣರೂ ಶೈವ–ಅದ್ವೈತ ತತ್ತ್ವಾಸಹಿಷ್ಣುಗಳೂ, ಶ್ರೀಸುರೇಂದ್ರತೀರ್ಥಯತಿಗಳ ವರಕುಮಾರಕರೂ, ಮೂರೂ ಲೋಕಗಳಲ್ಲೂ “ಸರ್ವತಂತ್ರಸ್ವತಂತ್ರ”ರೂ, ಮುಂತಾಗಿ ವಿಖ್ಯಾತರಾದ ಶ್ರೀವಿಜಯೀಂದ್ರತೀರ್ಥರು ನಮ್ಮನ್ನು ರಕ್ಷಿಸಲಿ.**

## ವಿಜಯೀಂದ್ರತೀರ್ಥ ಪರಾಕ್

ಶ್ರೀಮತ್ಪರಮಹಂಸ ಪರಿವ್ರಾಡ್ರಾಜಾಧಿರಾಜ, ಪದವಾಕ್ಯಪರಮಾಣ, ಪಾರಾವಾರಪಾರೀಣ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನ ಗರಿಷ್ಠ, ಸರ್ವತಂತ್ರಸ್ವತಂತ್ರ, ಷಡ್ದರ್ಶನಾಚಾರ್ಯವರ್ಯ, ಚತು: ಷಷ್ಟಿಕಲಾಪಾರಾವಾರ ಪಾರೀಣಶೇಖರ, ನಾಸ್ತಿಕಕುಲತಿಮಿರ ನಿರಾಕರಣ ಸಹಸ್ರಕಿರಣ, ಆಸ್ತಿಕದರ್ಶನ ಸಂರಕ್ಷಣನಿಪುಣ, ದುರ್ವಾದಿಮತ್ತಮಾತಂಗ ಗರ್ವದಲನಪಂಚಾನನ, ಅನಿತರ ಸಾಧಾರಣ ಕೃತಿಕರಣದಿಗಂತ ವಿಶ್ರಾಂತಕೀರ್ತಿಚಂದ್ರಿಕಾವಿರಾಜಿತ, ನಿಖಿಲಯತಿವರ ಸಂಸೇವ್ಯಮಾನ ಪಾದಪಂಕಜ, ಕರ್ಣಾಟಕ ಸಾಮ್ರಾಜ್ಯಾಧೀಶ್ವರಾಜ್ಞಯಾ ಶ್ರೀರಾಮರಾಜಸಾರ್ವಭೌಮಾನುಷ್ಠಿತ ರತ್ನಾಭಿಷೇಕ ವಿಶೋಭಿತ ಮಹಿಮ, ಶ್ರೀಮದ್ವೈದಿಕ ಸದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ,

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮುಖ್ಯ ಮಹಾಸಂಸ್ಥಾನ ಪೂರ್ವಾದಿಮಠೀಯ, ವಿದ್ಯಾಸಿಂಹಾಸನಾಧೀಶ್ವರ, ಶ್ರೀಮದ್ರಘುನಂದನ ತೀರ್ಥ ಶ್ರೀಪಾದ ಕರಕಮಲ ಸಂಜಾತ, ಶ್ರೀಮತ್ಸುರೇಂದ್ರತೀರ್ಥ ಶ್ರೀಪಾದ ವರಕುಮಾರಕ, ಶ್ರೀಮದ್ವಿಜಯೀಂದ್ರತೀರ್ಥ ಯತಿಸಾರ್ವಭೌಮ ಜಯ ಜಯ"

**ಸಮಕಾಲೀನ ಪೀಠಾಧೀಶ್ವರರು –**

ಶ್ರೀವ್ಯಾಸರಾಜರು, ಶ್ರೀಶ್ರೀನಿವಾಸತೀರ್ಥರು, ಶ್ರೀರಾಮತೀರ್ಥರು, ಶ್ರೀ ಕೂಡ್ಲಿ ಅಕ್ಷೋಭ್ಯತೀರ್ಥ ಸಂಸ್ಥಾನದ ಶ್ರೀನಾರಾಯಣ ಯತಿಗಳು, ಶ್ರೀವಾದಿರಾಜರು, ಶ್ರೀ ಉತ್ತರಾಧಿಮಠದ ಶ್ರೀ ರಘೋತ್ತಮತೀರ್ಥರು, ಭಂಡಾರಕೇರಿಮಠದ ಶ್ರೀ ರಘುಪತಿತೀರ್ಥರು, ಶ್ರೀ ವಲ್ಲಭಾಚಾರ್ಯರು, ಕಾಶೀಮಠದ ಶ್ರೀಯಾದವೇಂದ್ರತೀರ್ಥರು, ಶ್ರೀ ಗೋವಿಂದಒಡೆಯರು, ಮೊದಲಾದವರು.

**ಸಮಕಾಲೀನ ರಾಜ–ಚಕ್ರವರ್ತಿಗಳು –**

ದೆಹಲಿಯ ಅಕ್ಬರ್, ಜಹಾಂಗೀರ್, ಶ್ರೀಕೃಷ್ಣದೇವರಾಯ, ಅಚ್ಯುತರಾಯ, ತಿರುಮಲರಾಯ, ಅನಂತಶಯನದ ಉದಯಮಾರ್ತಾಂಡವರ್ಮ, ಚೆಂಜಿಯ ಸೂರಪ್ಪನಾಯಕ, ಮೈಸೂರಿನ ದೇವರಾಜ, ನಂಜರಾಜ, ಮೊದಲಾದವರು

**ಸಮಕಾಲೀನ ಪರವಾದಿಗಳು ಮತ್ತು ಪಂಡಿತರು –**

ಶ್ರೀವಿಜಯೀಂದ್ರತೀರ್ಥರೊಡನೆ ವಿವಿಧ ಶಾಸ್ತ್ರಗಳಲ್ಲಿ ನೂರಾರು ಜನ ಪರವಾದಿಗಳು ವಾದಮಾಡಿದ್ದಾರೆ. ಅವರುಗಳಲ್ಲಿ ಮುಖ್ಯರೆಂದರೆ ಶ್ರೀನೃಸಿಂಹಾಶ್ರಮ ಮುನಿಗಳು, ಶ್ರೀ ಮಧುಸೂದನ ಸರಸ್ವತಿಗಳು,

ಅದ್ವೈತ ವಿದ್ಯಾಚಾರ್ಯರೂ, ಶೈವಾದ್ವೈತ ಮತ ಪ್ರವರ್ತಕರೂ ಆದ ಶ್ರೀ ಅಪ್ಪಯ್ಯ ದೀಕ್ಷಿತರೂ, ಶ್ರೀ ಭಟ್ಟೋಜೀದೀಕ್ಷಿತರು, ಶ್ರೀ ಮುರಳೀಧರಭಟ್ಟರು, ಶ್ರೀ ಗಂಗಾಧರ ಶರ್ಮರು, ಶ್ರೀ ಪ್ರಭಂಜನಶರ್ಮರು, ಶೈವಸನ್ಯಾಸಿಗಳಾದ ಶ್ರೀ ಲಿಂಗರಾಜೇಂದ್ರರು, ಅಘಮರ್ಶನ ತಾತಾಚಾರ್ಯರು.

**ವಿಜಯೀಂದ್ರರ ಕಾರ್ಯಕ್ಷೇತ್ರ** – ಶ್ರೀವಿಜಯೀಂದ್ರರು ತಮ್ಮ ಜೀವಿತದ ಬಹುಕಾಲವನ್ನು ಕುಂಭಕೋಣದಲ್ಲೇ ಕಳೆದರು. ಕುಂಭಕೋಣದಲ್ಲಿ ಉತ್ತಮರೀತಿಯಾಗಿ ವಿದ್ಯಾಪೀಠವನ್ನು ಸಂಸ್ಥಾಪಿಸಿ, ಚತು:ಶಾಸ್ತ್ರಗಳಲ್ಲಿ ಪರಿಣಿತರಾಗಿ, ಭಾರತದ ವೈದಿಕ ವಿದ್ಯೆಗಳು, ಸಂಸ್ಕೃತ ಭಾಷೆ, ಅಸಂಖ್ಯ ಪರವಾದಿಗಳೊಡನೆ ವಾದ, ದಿಗ್ವಿಜಯ, ಮುಂತಾದವನ್ನು ಸಾಧಿಸಿ ವಿಜೃಂಭಿಸಿದರು.

ರಾಗ – ಶಂಕರಾಭರಣ : ತಾಳ – ಆದಿತಾಳ

ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ
ಗಜೇಂದ್ರ ಬಂದದೆ ಸುಜನರು ನೋಡ ಬನ್ನಿ ।ಪ।

ಕಲುಷವೆಂಬಪಂಕವನೀಡ್ಯಾಡಿ। ವಿ–
ಮಲ ಹರಿಪದ ತೀರ್ಥದ ಜಲಪಾನ ಮಾಡಿ
ಸಲೆ ಗುರುಮಧ್ವ ಮತಾಂಬುಧಿಯೊಳು
ನಲಿನಲಿದು ಕುಣಿದಾಡುತಲೀ ।೧।
ರಮೇಶನ ಧ್ಯಾನವೆಂಬ ಮದವೇರಿ
ಮಮತೆಯೆಂಬ ಕದಳಿ ಕಿತ್ತಾಡಿ

ವಿಮಲ ಶ್ರೀಹರಿಪದರಜ ಶಿರದಿ ಧರಿಸಿ
ಕುಮತಗಳೆಂಬ ತರುಗಳ ಮುರಿಯುತಲೀ ।೨।

ಗುರು ಸುರೇಂದ್ರತೀರಥರೆಂಬ
ವರಮಾವಟಿಗನ ಆಜ್ಞೆಯೊಳಿದ್ದು
ಗುರುಪುರಂದರವಿಟ್ಠಲನ ಭಕ್ತಿಯೆಂಬ
ಸರಪಣಿಯೊಳು ನಲಿನಲಿದಾಡುತಲೀ ।೩।

**ರಾಗ – ಹಂಸಧ್ವನಿ : ತಾಳ – ಆದಿತಾಳ**

ವಿಜಯೀಂದ್ರ ಯತಿಯ ನಾ ಕಂಡೆ । ಮುದಗೊಂಡೆ । ಪ ।
ವಿಜಯ ಡಂಗುರ ಹೊಯಿಸಿ ಗಜವೇರಿ ಬರುತಿಪ್ಪ। ಅ ಪ ।
ನಿಜದಿ ಲಿಂಗಣ್ಣನ ಗೆಲಿದು । ಮಠವನು ಪಡೆದು ।
ಸುಜನರ ಭಯ ಪರಿಹರಿಸುತ ಮೆರೆಯುವ । ೧ ।
ಹರಿಯೇ ಪರನೆಂಬುವ ಸರ್ವ ಶಾಸ್ತ್ರ ಕೋವಿದನ
ಧರಣೀಶನುತ ವ್ಯಾಸಮುನಿಯ ವಿದ್ಯಾಸುತನ । ೨ ।
ಸುಖಮುನಿಯಾಸ್ಥಾನ ರಾಜನ ವರತೇಜನ
ಅಕಳಂಕಮಹಿಮಾಸಿರಿ ಸುರೇಂದ್ರನ ಕುವರನ । ೩ ।
ಚೌಷಷ್ಟಿ ಕಲೆಗಳರಿತವನ ಮಾಯಿಭೀಕರನ ಶ್ರೀಶ
ಗುರುಪುರಂದರವಿಟ್ಠಲನ್ನ ಭಜಿಪನ್ನ । ೪ ।

## ರಾಗ : ಕಾಂಬೋಜಿ

ವಿಜಯೀಂದ್ರ ಗುರುರಾಯರ ಅನುದಿನ ಪೂಜಿಸಿರೈ ಮುದದಿ ।ಪ।

ಯಾಚಕ ಭಕ್ತರ ಕಲ್ಪಭುಜನಾಗಿ ಪುಟ್ಟಿ
ವ್ಯಾಸರಾಯರನುಗ್ರಹ ಪಡೆದು ಜಗದಿ ಮೆರೆವ ।ಅ.ಪ.।
ಮುಂದೆ ಬೊಮ್ಮನಾಗಿ ಪುಟ್ಟುವಾನಂದತೀರ್ಥರ ಗ್ರಂಥಗಳಿಂದ ।
ಚಂದ್ರಿಕಾಚಾರ್ಯರಿಂದ ತಿಳಿದು ನಲಿದು ಲೋಕದೊಳು ಮೆರೆದು ।
ಸುಂದರಾಂಗ ಶ್ರೀಮೂಲರಾಮಚಂದ್ರನ ಚರಣಾರವಿಂದ ।
ಅಂದದಿಂದ ಭಜಿಸುತ್ತ ಬಂದು ಕುಂಭಕೋಣದಿ ನಿಂತ ॥ ೧ ॥
ಪಂಕಜಧರೋತ್ತಮನೆಂಬೋ ಸುಧಾಮೋದಗಳಿಂದ
ಹಿಂಗದೆ ಶಿಷ್ಯರಿಗರುಹುತ ಶ್ರುತಿಸ್ಮೃತಿಗಳಿಂದ ಕೂಡಿ ।
ಶಂಕಿಸುತ ಬರುವ ಅದ್ವೈತಶಂಕರ ಕಿಂಕರರ ಕರಗಳ
ಬಿಂಕದಿ ಮಧ್ವಸಿದ್ಧಾಂತದಂಕುಶದಿಂದ ಸದೆದ ॥ ೨ ॥
ಶೀಲಭಕ್ತಮನಕಮಲಭಾನುಧೇನುವಾಗಿ ಸೇವಕರ
ಪಾಲಿಸಿ ಸಂತಾನ ಕೊಡುವ ನೋಡಿ ಬೇಡಿ ಈಡಿಲ್ಲಧಾಂಗೆ ।
ಇಳಿಯುತ ಕಾಂಚೀಪುರದಾ ನೆಲದಿ ಶೇಷಶಯನನಾದ
ಚಲುವ ವರದರಾಜನ ನೋಡಿ ನಲಿದು ನಲಿದು ಕುಣಿದಾಡುವ॥೩॥

---

ರಾಗ – ಕಾಂಬೋಜಿ ತಾಳ – ಝಂಪೆತಾಳ

ವಿಜಯಮೂರುತಿ ಪೊರೆಯೋ ವಿಜಯೀಂದ್ರಯತಿವರ್ಯ ।
ವಿಜಯನಗರೇಶನುತ ಪಾದಪಂಕಜನೇ ।ಪ।
ಕಾವೇರಿ ತಟನಿಕಟ ಕುಂಭಕೋಣಾವಾಸಿ ।
ಶೈವಯತಿಮತ್ತೇಭ ಪಂಚಾನನ ।ಅ.ಪ.।

ಪರಮಗುರು ಶ್ರೀಮದಾನಂದತೀರ್ಥೋಧ್ಯಾನ
ಪರಶಾಸ್ತ್ರವೆಂಬ ಸತ್ಸಾರಸದಿ ವಿಹರಿಸುವ ।
ಪರಮಹಂಸನೇ ಯಮ್ಮ ಪರಿಕಿಸದಲನವರತ
ಪರವಾದಿಜಯವೀಯೋ ನರಹರಿಯ ಪ್ರಿಯನೇ । ೧ ।

ಹತ್ತ್‌ಹತ್ತು ನಾಲ್ಕು ಸತ್ಕೃತಿಗಳನು ವಿರಚಿಸಿ
ಮಿಥ್ಯವಾದವ ಮುರಿದ ಸತ್ಯಶೀಲ ಯತೀಂದ್ರ ।
ಮತ್ತಕಾಶಿನಿಯರಂ ಕಣ್ಣೆತ್ತಿ ನೋಡದಲೆ
ಚಿತ್ತೇಶನಂ ಗೆಲಿದೆ ಸುತ್ತಲೂ ಕಾಯೆಮ್ಮ । ೨ ।
ಪಂಥವನು ತೊಟ್ಟು ಅಪ್ಪಯ್ಯದೀಕ್ಷಿತರೆಂಬ
ಮತ್ತವಾದಿಯ ಜಯಿಸಿ ಮಧ್ವಮತ ರಕ್ಷಿಸಿದೆ ।
ಪತಿತಪಾವನ ನಮ್ಮ ಕಮಲೇಶನಂಘ್ರಿಯನು
ನುತಿಸುತ್ತಲನವರತ ಭುಕುತರನು ಪೊರೆಯುತಿಹೆ ॥ ೩ ॥

## ರಾಗ – ನಾದನಾಮಕ್ರಿಯೆ ತಾಳ – ಝುಂಪೆತಾಳ

ವಿಜಯೀಂದ್ರ ರಾಜಗುರುರಾಜಾಧಿರಾಜ ಮಹಾರಾಜ ಶಿರೋ ರತುನ । ಪ ।
ಭಜಿಸುವೆ ನಿಮ್ಮ ಪಾದಾಂಬುಜವ ಬಿಡದೇ ನಿತ್ಯ ತ್ಯಜಿಸದೇ ಪಾಲಿಸೆನ್ನ ।ಅ.ಪ. ।
ಕ್ಷೋಣಿಯೊಳು ವರಕುಂಭ । ಕೋಣಿಯೋಳು ಸಾರಂಗ।ಪಾಣಿಪಾದಾಂಬುಜವ ।
ಧೇನಿಸಿ ದುರ್ವಾದಿಗಾಳುರ ಹಿಂಡುಗಳ । ವಾಣೀಲಿ ತರಿದಿಯಲ್ಲೊ । ೧ ।
ಮಾನಿನೀಮಣಿ ದುರ್ಮಾನದಿಂದಲಿ ಬಂದು । ಕಾಮಪೊರೈಸೆನ್ನಲು ।
ಮೌನಿಕುಲ್ಲೋತ್ತಂಸಧೇನಿಸಿ ಪುಷ್ಪದಿ । ಮಾನಭಂಗ ಮಾಡಿದೆಯಲ್ಲೋ । ೨ ।
ವಾದಿ ಸಂಬಂದ ದುರ್ವಾದಿ ಲಿಂಗಣ್ಣನ । ಭೇದಿಸಿ ಅವನ ಮತ ।
ಸಾಧಿಸಿ ಸರ್ವತಂತ್ರ ಸ್ವತಂತ್ರನಾದ ಲಕ್ಷ್ಮೀಧವಗರ್ಪಿಸಿದೆಯಲ್ಲೋ । ೩ ।
ಮಾರನ ಶರಧಿಕ್ಕರಿಸಿ ಮಹ । ಕಾವೇರಿಯತೀರದಲ್ಲಿ ।
ಸೇರಿಸೇವಿಪರಿಷ್ಟ । ಪೂರೈಸಿ ಕಾಶ್ಯಪ । ತೀರದಡದಲ್ಲಿರುವೇ । ೪ ।
ಅಜಭವಾಧಿಪನಾದ । ವಿಜಯಲಕ್ಷ್ಮೀನರಸಿಂಹನ ಭಜಿಸುತ ।
ಸುಜನವಂದಿತ ನಮ್ಮ । ಗುರುಮಧ್ವರಾಯರ । ಮತಸಂಸ್ಥಾಪಕರೇ । ೫ ।

ರಾಗ – ಶಂಕರಾಭರಣ ತಾಳ – ಆದಿತಾಳ

ಕರವೊಡ್ಡಿ ಬೇಡುವೆ ಗುರು ವಿಜಯೀಂದ್ರ ।
ನೆರೆನಂಬಿದ ಭಕುತನ ಕಾಯೋ ದೊರೆಯೇ । ಪ ।
ಕರಕರೀ ಭವಸಾಗರದಿ ಮುಳುಗುತಿಹೆ ।
ಪೊರೆವರಿನ್ನೊಬ್ಬರನರಿಯೇ ಗುರುವೇ । ಅ.ಪ ।
ಧರಣಿಯೊಳು ಭೂಸುರೋತ್ತಮರಲ್ಲಿ ಜನಿಸಿ । ಸಕ್ರಮದಿ ವಿಪ್ರತ್ವವ ವಹಿಸಿ ।
ಗುರುವ್ಯಾಸ ಮುನಿರಾಯರ ಪಾದಕ್ಕೆರಗಿ ಉರುಮಧ್ವಾಗಮಾರ್ಥವ ಗ್ರಹಿಸಿ ।
ಮರಳಿ ಎರಡು ನಾಲ್ಕು ಭಾರಿಶಾಸ್ತ್ರಗಳರ್ಥ ಗ್ರಹಿಸಿ ಧಾರುಣಿಯೊಳು ಚರಿಸಿ ।
ಅರದೂರಮಾಡಿಪೊರೆವ ಪ್ರಭುಸಲಹೆನ್ನ ನಿರತನಾನೆರಗುವೆ ನಿನ್ನ ಚರಣವಗ್ರಹಿಸಿ।೧।
ಭಾಗವತಾಗ್ರೇಸರಗುರು ಸುರೇಂದ್ರಮುನಿ ಕರಪದುಮ ಸಂಜಾತ ।
ಯೋಗಿವರ್ಯರೇ ನಿಮ್ಮ ಪಾದ ಸೇರಿದ ಜನರಘವ ಕಳೆವ ನಿರ್ಭೀತ ।
ಭೋಗಿಭೂಷಣನೇ ಪರದೈವವೆಂಬಾ ದುರ್ವಾದಿಗಳ ಗೆದ್ದ ಖ್ಯಾತ
ರಾಘವೇಂದ್ರರ ಪರಮ ಗುರುವೇ ನಿಮ್ಮಯ ಪಾದ ನೆರೆನಂಬಿಹೆ ನಿಮ್ಮ ದೂತ ।೨।
ಚರುರಧಿಕಶತಗ್ರಂಥವಿರಚಿತ ದುರ್ಮತಿ ಲಿಂಗಣ್ಣನ ಗೆದ್ದು ಮಠವ ।
ಚತುರಧಿಕಷಷ್ಠಿ ವಿದ್ಯಾ ನಿಪುಣನೆ । ರತಿಪತಿಪಿತಗರ್ಪಿಸುವ ।
ಕ್ಷಿತಿಯೊಳು ಪತಿತಪಾವನ ರಘುಪತಿಯೇ ಸರ್ವೋತ್ತಮನೆಂದು ವಾದಿಸುವ ।
ತತುವೇಶರ ಪತಿಪಿತ ಜಯ ಲಕುಮೀಪತಿನರಸಿಂಹನರ್ಚಿಸುವ ॥ ೩ ॥

---

ರಾಗ – ಆನಂದಭೈರವಿ ತಾಳ – ಆದಿತಾಳ

ಎದುರಾರೋ ಯತಿಗೆ ಸಮನ್ಯಾರೋ । ಪ ।
ಪದನಂಬಿದವರ ಪೊರೆವ ಅಸ್ಮದ್ಗುರುವಿಗೆ । ಅ.ಪ. ।
ಜೀವಾನ್ಯದ್ಬ್ರಹ್ಮನೆಂದು ಪೇಳುವುದಕ್ಕೆ।
ಜನ್ಮಾದಿಶಾಸ್ತ್ರಯೋನಿಲಕ್ಷನದ್ವಯವೆಂದು।
ಈವಿಧ ಬೋಧಿಸಿ ಪೊರೆವಂಥ ಗುರುವ ।
ಇನ್ಯಾವರ ಕಾಣೆನಾ ಕ್ಷಿತಿಯೊಳಗೆ ।೧॥

ತತ್ರಾನ್ಯತ್ರಾನ್ಯತ್ರೈವ ಉಭಯತ್ರ ಶಬ್ದ।
ಚತುಷ್ಟಯ ಅದರೊಳು ನಾಮಲಿಂಗ ।
ಪುತ್ರಗೆ ಪೇಳುವಂದದಿ ದ್ವೈವಿಧ್ಯವ।
ಚಿತ್ತಕ್ಕೆ ಬರುವಂತೆ ಪೇಳಿದ ವಿಜಯೀಂದ್ರಗೆ ।೨।
ಮೊದಲು ಪಾದದಿ ಅನ್ಯತ್ರ ಪ್ರಸಿದ್ಧನಾಮ।
ಲಿಂಗಾತ್ಮಕ ನಾಮ ಮೂರಲ್ಲು ಭಯತ್ರ।
ಪದವ ಭಜಿಪ ಜಯನರಸಿಂಹನೇ ।
ಶ್ರುತಿಲಿಂಗಾದಿ ಅನ್ಯತ್ರೈವ ಪ್ರಸಿದ್ಧನೆಂಬರಿಗೆ ।೩।

# “ಶ್ರೀ ವಿಜಯೀಂದ್ರರ ಪವಾಡಗಳು”

**ಶ್ರೀ ಒಮ್ಮೆ ವಿಜಯೀಂದ್ರತೀರ್ಥ ಶ್ರೀಪಾದಂಗಳವರು ಸಾರ್ವತ್ರಿಕವಾಗಿ ಘೋಷಿಸಿದರು – “ನಮ್ಮೊಂದಿಗೆ ಯಾರು ಬೇಕಾದರೂ ನಮ್ಮ ಚತು:ಷಷ್ಟಿ ಪಾಂಡಿತ್ಯದ ಬಗ್ಯೆ ಪರೀಕ್ಷಿಸಬಹುದು”. ಇದರಿಂದ ಅವರಿಗೆ ಬಹಳ ಜನರು ವಾಗ್ವಾದಕ್ಕೆ, ತಂತ್ರಶಕ್ತಿಗೆ ಪರೀಕ್ಷಿಸಲು ಬಂದರು. ಅವುಗಳಲ್ಲಿ ಕೆಲವನ್ನು ಆಯ್ದು ಸಂಗ್ರಹಿಸಲಾಗಿದೆ.**

**೧. ಮಲಯಾಳೀ ಮಾಂತ್ರಿಕನ ಶರಣಾಗತಿ –** ಒಮ್ಮೆ ಒಬ್ಬ ಆಜಾನುಬಾಹುವಾದ ಮಲಯಾಳಿ ಮಾಂತ್ರಿಕನೊಬ್ಬ ಶ್ರೀವಿಜಯೀಂದ್ರರ ಬಳಿ ಬಂದು “ನಾನೊಬ್ಬ ಮಂತ್ರವಾದಿ, ನೀವು ಸಕಲ ವಿದ್ಯೆಗಳನ್ನೂ ಬಲ್ಲರೆಂಬುತ್ತಾರೆ ಜನ. ನನ್ನ ಜೊತೆ ಪರೀಕ್ಷೆಗೆ ಬರುತ್ತೀರಾ ಅಥವಾ ಜಯಪತ್ರಿಕೆ ಬರೆದುಕೊಡಿ” ಎಂದನು. ಶ್ರೀಗಳು ಪರೀಕ್ಷೆಗೆ ಸಮ್ಮತಿಸಿದರು. ಮಾರನೇ ದಿನ ಅಪಾರ ಜನಸ್ತೋಮ.

ಮಂತ್ರವಾದಿ ಅನೇಕ ಗೆರೆಗಳನ್ನು ವರ್ತುಲಾಕಾರವಾಗಿ ಹಾಕಿ ಮಧ್ಯೆ ಒಂದು ನಿಂಬೆಹಣ್ಣನ್ನು ಇಟ್ಟು, ಅದಕ್ಕೆ ಕುಂಕುಮ ಹಚ್ಚಿದ್ದಾನೆ. ಕೆಂಪು ಹೂಗಳಿಂದ ಅಲಂಕೃತಗೊಳಿಸಿ, ಕೆಂಪನೆಯ ಓಕುಳಿಯನ್ನು ಸುತ್ತಲೂ ಚೆಲ್ಲಿದ್ದಾನೆ. ಮಂತ್ರವಾದಿ ಸ್ವಾಮಿಗಳಿಗೆ ಹೇಳುತ್ತಾನೆ "ನೀವು ಆ ಗೆರೆಗಳನ್ನು ದಾಟಿ ಮಧ್ಯದಲ್ಲಿರುವ ನಿಂಬೆ ಹಣ್ಣನ್ನು (ಮೋಡಿ) ಎತ್ತಿ ತರಬೇಕು. ಒಂದೊಂದು ಗೆರೆ ದಾಟುವಾಗಲೂ, ಬೆಂಕಿ, ಶೂಲ, ಸರ್ಪಾದಿಗಳು ಬಂದು ಹಿಂಸಿಸುತ್ತವೆ. ಹಾಗೊಂದು ವೇಳೆ ಅವುಗಳಿಂದ ತಪ್ಪಿಸಿಕೊಂಡರೂ, ನಿಂಬೆ ಹಣ್ಣನ್ನು ಮುಟ್ಟಿದ ಕೂಡಲೇ ಮನುಷ್ಯ ಮೃತನಾಗುತ್ತಾನೆ. ಇದು ನಿಮಗೆ ಸಾಧ್ಯವೇ?" ಆಗ ಸ್ವಾಮಿಗಳು ಇದನ್ನು ನಮ್ಮ ಶಿಷ್ಯ ಭೀಮಾಚಾರ್ಯನೇ ಮಾಡುತ್ತಾನೆ ಎಂದು ಹೇಳಿ ಹತ್ತಿರದಲ್ಲಿದ್ದ ಭೀಮಾಚಾರ್ಯನೆಂಬ ತರುಣನನ್ನು ಕರೆದು ಅವನಿಗೆ ಮಂತ್ರಪೂತ ಉದಕವನ್ನು ಪ್ರೋಕ್ಷಿಸಿ "ಭೀಮಸೇನ, ಧೈರ್ಯವಾಗಿ ಹೋಗಿ ಮೋಡಿಯನ್ನು ತೆಗೆ" ಎಂದರು. ಭೀಮಸೇನನು ಮುನ್ನುಗ್ಗಿ ಒಂದೊಂದೇ ಗೆರೆಯನ್ನು ದಾಟುತಾ ಹೊರಟನು. ಅದೇ ವೇಳೆ ಮಂತ್ರವಾದಿಯೂ ಸಹ ಭೀಮಸೇನನ ಮೇಲೆ ಬೂದಿಯನ್ನು ಎರಚುತ್ತಾ "ಜೈ ಭೈರವಿ, ಹ್ರಾಂ, ಹ್ರೀಂ, ಹ್ರೂಂ, ಚಂಡಿ, ಚಾಮುಂಡಿ" ಮುಂತಾಗಿ ಕೂಗುತ್ತಿದ್ದನು. ಆಕಾಶದಿಂದ ಬೆಂಕಿ ಬೀಳಹತ್ತಿತು. ಆದರೆ ಬೆಂಕಿ ಹಾಲಾಗಿ ಪರಿಣಮಿಸಿ ಭೀಮಸೇನನಿಗೆ ಅಭಿಷೇಕವಾಯಿತು. ಮುಂದೆ ನಾಲ್ಕನೇ ಗೆರೆ ದಾಟಿ, ಐದನೇ ಗೆರೆಯ ಬಳಿ ಹೋದೊಡನೆ ದೊಡ್ಡ ಸರ್ಪವೊಂದು ಅವನ ಮೇಲೆ ಏರಿ ಬಂದಿತು. ಶ್ರೀಗಳು ಕಣ್ಮುಚ್ಚಿ ಧ್ಯಾನಿಸಿದರು. ಎಲ್ಲರೂ ಆಶ್ಚರ್ಯಪಡುವಂತೆ ಎಲ್ಲಿಂದಲೋ ಒಂದು ಗರುಡಪಕ್ಷಿ ಬಂದು ಆ ಸರ್ಪವನ್ನು ಎತ್ತಿಕೊಂಡು ಹಾರಿಹೋಯಿತು. ಭೀಮಸೇನ ಆರನೇ ಗೆರೆಯಲ್ಲಿ ಕಾಲಿತ್ತ, ಆಗ ತೀಕ್ಷ್ಣ್ಯವಾದ ಒಂದು ಶೂಲ ಬಂದು ಅವನ ಎದೆಯಲ್ಲಿ ನೆಟ್ಟಿತು. ಶ್ರೀಗಳು ಕೈಯಲ್ಲಿ ಹಿಡಿದಿದ್ದ ಮಂತ್ರಾಕ್ಷತೆಯನ್ನು ಮೇಲೆರಚಿ ಧ್ಯಾನಿಸಿದರು. ಎದೆಯಲ್ಲಿ ನೆಟ್ಟಿದ್ದ ಶೂಲ ಪುಷ್ಪಹಾರವಾಗಿ ಪರಿಣಾಮವಾಯಿತು. ಕೊನೆಗೆ ಭೀಮಸೇನನು ಎಲ್ಲಾ ಗೆರೆಯನ್ನು ದಾಟಿ ಅಲ್ಲಿದ್ದ ನಿಂಬೆ ಹಣ್ಣನ್ನು (ಮೋಡಿ) ತೆಗೆದುಕೊಂಡು ಶ್ರೀಗಳ ಬಳಿ ಬಂದು ವಂದಿಸಿದ. ಆಗ ಮಂತ್ರವಾದಿ ತನ್ನ ತಪ್ಪನ್ನು ಒಪ್ಪಿ

ಶರಣಾಗತನಾದ. ಶ್ರೀಗಳು ಅವನ ತಪ್ಪನ್ನು ಕ್ಷಮಿಸಿ ಅವನಿಗೆ ಇನ್ನೆಂದೂ ಮಂತ್ರಶಕ್ತಿಯನ್ನು ದುರ್ಬಳಕೆ ಮಾಡಕೂಡದೆಂದು ಆಜ್ಞಾಪಿಸಿದರು.

**೨. ದೊಂಬರಾಟದಲ್ಲಿ ಪರಿಣತಿ –** ಒಮ್ಮೆ ಒಬ್ಬ ದೊಂಬರಾಟದವನು ಶ್ರೀಗಳ ಚತು:ಷಷ್ಟಿ ಕಲೆಯಲ್ಲಿ ಪರಿಣಿತರೆಂಬುದನ್ನು ತಿಳಿದು, ದೊಂಬರಾಟದಲ್ಲಿ ಪರೀಕ್ಷಿಸಲು ಬಂದನು. ಆಗ ಸ್ವಾಮಿಗಳು "ನಾಳೆ ಮಧ್ಯಾಹ್ನ ಕುಂಭೇಶ್ವರನ ದೇವಾಲಯದ ಪಟಾಂಗಣದಲ್ಲಿ ನಿನ್ನ ವಿದ್ಯೆಯನ್ನು ಪ್ರದರ್ಶಿಸು. ಅಲ್ಲೇ ನಮ್ಮಿರ್ವರ ಪರೀಕ್ಷೆಯಾಗಲಿ" ಎಂದರು. ಇಡೀ ಊರಿನ ಜನರೆಲ್ಲ ಸಹಸ್ರಾರು ಸಂಖ್ಯೆಯಲ್ಲಿ ಅಲ್ಲಿ ನೆರೆದಿದ್ದರು. ದೊಂಬರವನು ತನ್ನ ವಿದ್ಯೆಯನ್ನು ಪ್ರದರ್ಶಿಸುತ್ತಾ ಹಗ್ಗದ ಮೇಲೆ ನಡೆಯುವುದು, ದೊಡ್ಡ ಬೊಂಬಿನ ಮೇಲೇರಿ ಅಲ್ಲಿ ವಿವಿಧ ಚಮತ್ಕಾರಗಳನ್ನು ತೋರಿಸುವುದು ಇತ್ಯಾದಿ ಅದ್ಭುತ ವ್ಯಾಪಾರದಿಂದ ಜನರನ್ನು ಮುಗ್ಧಗೊಳಿಸಿದರು. ಶ್ರೀಗಳೂ ಅವನ ಕೌಶಲ್ಯವನ್ನು ಮೆಚ್ಚಿದರು. ಆ ದೊಂಬರವನು ಶ್ರೀಗಳನ್ನು ನೀವೂ ನಿಮ್ಮ ವಿದ್ಯೆಯನ್ನು ಪ್ರದರ್ಶಿಸಿರೆಂದನು.

ಶ್ರೀಗಳು ತಮ್ಮ ಶಿಷ್ಯರನ್ನು ಕರೆಸಿ, ಹೂ ಕಟ್ಟುವಂತಹ ಎಳೆಯ ಬಾಳೇನಾರನ್ನು ಒಂದಕ್ಕೊಂದರಂತೆ ಸೇರಿಸಿ ಕಟ್ಟಿ ಆ ದಾರವನ್ನು ಕುಂಭೇಶ್ವರನ ದೇವಾಲಯದ ಗೋಪುರದಿಂದ ಶ್ರೀ ಸಾರಂಗಪಾಣಿ ದೇವಾಲಯದ ಗೋಪುರದವರೆಗೆ ಕಟ್ಟಿರಿ ಎಂದರು. ದೊಂಬರವನು ದಂಗಾದನು. ಶ್ರೀಗಳು ಕುಂಭೇಶ್ವರನ ಗುಡಿಯ ಗೋಪುರದ ಮೇಲೆ ನಿಂತು, ಎಲ್ಲ ಜನರು ನೋಡುತ್ತಿರುವಂತೆಯೇ ಕುಂಭೇಶ್ವರನ ದೇವಾಲಯದಿಂದ ಸಾರಂಗಪಾಣಿ ದೇವಾಲಯದ ಗೋಪುರದವರೆಗೆ ಕಟ್ಟಲಾದ ಎಳೆಯ ಬಾಳೇನಾರಿನ ಮೇಲೆ ಪಾದುಕೆಯನ್ನು ಹಾಕಿಕೊಂಡು ಲೀಲಾಜಾಲವಾಗಿ ನಡೆದರು. ಈ ರೀತಿ ದೊಂಬರವಿದ್ಯೆಯಲ್ಲೂ ಪರಿಣತರೆಂಬುದನ್ನು ತೋರಿಸಿದರು. ದೊಂಬ ಶರಣಾಗತನಾದ.

**೩.ಶಿಲ್ಪಕಲಾಚಾತುರ್ಯ –** ಒಮ್ಮೆ ಪಾಂಡ್ಯದೇಶದಲ್ಲಿ ನರಸಿಂಹ ವೀರರಾಮನ್ ಎಂಬ ಪಾಳೇಗಾರನಿದ್ದನು. ಅವನು ತನ್ನ ಲೋಹಶಿಲ್ಪದಲ್ಲಿ ಹೆಸರುವಾಸಿಯಾಗಿದ್ದನು, ಗರ್ವಿಷ್ಠನಾಗಿದ್ದನು. ತಾನೇ ಉತ್ತಮ ಕಲೆಗಾರ, ತನಗೆ ಸರಿಸಾಟಿಯಿಲ್ಲವೆಂದು ಭಾವಿಸಿ, ಒಮ್ಮೆ ಶ್ರೀ ವಿಜಯೀಂದ್ರ ಶ್ರೀಗಳ ಬಳಿ ಬಂದು ತನ್ನ ವಿದ್ಯೆಯನ್ನು ತೋರಿಸಿ, ನಟರಾಜ, ಭವಾನಿ, ಷಣ್ಮುಖ ಪ್ರತಿಮೆಯನ್ನು ಮಾಡಿ, ನೀವೂ ನಿಮ್ಮ ಕಲೆಗಾರಿಕೆ ವಿದ್ಯೆಯನ್ನು ತೋರಿಸಬಲ್ಲಿರಾ ಎಂದು ಪ್ರಶ್ನಿಸಿದನು.
ಶ್ರೀಗಳು ಆನಂದದಿಂದ ಒಪ್ಪಿ, ಕೂಡಲೇ ಹತ್ತಿರದಲ್ಲಿ ಮೇಣದ ಮುದ್ದೆಯನ್ನು ತೆಗೆದುಕೊಂಡು ತುಳಸಿಯ ಕಾಷ್ಟವನ್ನು ಕೈಯಲ್ಲಿ ಹಿಡಿದು, ಬರೀ ಮೇಣದ ಮುದ್ದೆಗಳಿಂದಲೇ ಕೆಲವೇ ಗಂಟೆಗಳಲ್ಲಿ ಉತ್ತಮವೂ, ಶಿಲ್ಪಶಾಸ್ತ್ರಕ್ಕೆ ಅನುಗುಣವೂ ಆದ ಯೋಗಾನರಸಿಂಹ, ರಾಮ, ಕೃಷ್ಣ, ಮಂಗಳಾಂಬಿಕಾ, ಭೂವರಾಹ ಮೂರ್ತಿಗಳನ್ನು ತಯಾರಿಸಿದರು. ಆ ಪಾಳೇಗಾರ ಶ್ರೀಗಳ ಕಲಾ ಚಮತ್ಕಾರವನ್ನು ಕಂಡು ನಿಬ್ಬೆರಗಾದ. ಮತ್ತು ಶ್ರೀಗಳನ್ನು ಕೋರಿಕೊಂಡ "ನೀವು ತಯಾರಿಸಿದ ಈ ಕಲಾಕೃತಿಗಳು ನನ್ನನ್ನು ಜಯಿಸಿದ ಸ್ಮಾರಕಕ್ಕಾಗಿ ಶಾಶ್ವತವಾಗಿರಬೇಕೆಂದು ನನ್ನ ಅಭಿಲಾಷೆ" ಎಂದೆನಲು, ಮಾರನೇ ದಿನ ಸ್ವಾಮಿಗಳು ತಾವು ತಯಾರಿಸಿದ ಪ್ರತಿಮೆಗಳ ಪಡಿಯಚ್ಚು ತಯಾರಿಸಿ, ತಾಮ್ರದ ಲೋಹದಿಂದ ಎರಕವನ್ನು ಹಾಕಿ ಅತಿ ಸುಂದರವಾದ ಪ್ರತಿಮೆಗಳನ್ನು ತಯಾರಿಸಿ ತೋರಿಸಿದರು. ಇವಲ್ಲದೇ ಶ್ರೀಗಳು ತಮ್ಮ ಅಮೃತಹಸ್ತದಿಂದಲೇ ನಿರ್ಮಿಸಿದ ಅನೇಕ ಮೂರ್ತಿಗಳೂ ಇಂದಿಗೂ ಪೂಜಿತಗೊಳ್ಳುತ್ತಿದೆ. ಅವುಗಳೆಂದರೆ ಯೋಗಾನರಸಿಂಹ, ರಾಮ, ಸೀತಾ, ಕೃಷ್ಣ, ಸಾರಂಗಪಾಣಿ, ಚಕ್ರಪಾಣಿ, ಭೂವರಾಹ, ಮಂಗಳಾಂಬಿಕೆ, ಹನುಮ, ಮುಖ್ಯಪ್ರಾಣ, ಗರುಡ, ಮುಂತಾದುವು ಇಂದಿಗೂ ಕುಂಭಕೋಣ ಶ್ರೀಮಠದಲ್ಲಿ ಪೂಜಿತವಾಗುತ್ತಿವೆ.

**೪.ಆಭರಣ ಕಲಾಚಾತುರ್ಯ –** ಒಮ್ಮೆ ವಿನಾಯಕ ರಾಮಚಂದ್ರ ಜೋಷಿ ಎಂಬ ಪ್ರಸಿದ್ಧ ರತ್ನಪುಡಿ ವ್ಯಾಪಾರಿ ಶ್ರೀಗಳನ್ನು ಕಂಡು ಆಭರಣ ತಯಾರಿಕೆ ಪರೀಕ್ಷೆ ಒಡ್ಡಿದನು. ಅದರಲ್ಲೂ ಕೂಡ ಆ ವ್ಯಾಪಾರಿ ತಯಾರಿಸಿದ

ಆಭರಣಗಳಿಂತ ಶ್ರೀಗಳು ತಯಾರಿಸಿದ ಆಭರಣಗಳೇ ಉತ್ತಮ ಗುಣಮಟ್ಟದ್ದೆಂದು ತೀರ್ಮಾನವಾಯಿತು.

**೫. ದೇವದಾಸಿಯ ಪರಾಜಯ** – ಒಮ್ಮೆ ಒಬ್ಬ ದೇವ ದಾಸಿಯು ಶ್ರೀಗಳವರನ್ನು "ಕಾಮಶಾಸ್ತ್ರ"ದಲ್ಲಿ ಪರೀಕ್ಷಿಸಬೇಕೆಂದು ಬಂದಳು. ಶ್ರೀಗಳು ಒಪ್ಪಿ "ನೀನು ನಾಳೆ ಸಂಜೆ ಬಾ" ಎಂದರು. ತಮ್ಮ ದ್ವಾರಕಪಾಲಕ ಶಿಷ್ಯನಿಗೆ ಒಂದು ಹೂವನ್ನು ನೀಡಿ, ಆ ದೇವದಾಸಿಯು ಸಂಜೆ ಮಠಕ್ಕೆ ಬರುವಾಗ ಅವಳ ಬಲಭುಜಕ್ಕೆ ಈ ಹೂವಿನಿಂದ ತಾಡನ ಮಾಡಲು ಹೇಳಿದರು. ಅದೇರೀತಿ ಸಂಜೆ ಬಂದ ಆ ದೇವದಾಸಿಗೆ ದ್ವಾರಪಾಲಕನು ಹೂ ತಾಡನ ಮಾಡಲು, ಆ ಸುಂದರಿಯು ಬಿರುಗಾಳಿಗೆ ಸಿಕ್ಕಿದ ಲತೆಯಂತೆ ಕಂಪಿಸುತ್ತಾ, ಯಾವುದೋ ಅವ್ಯಕ್ತ ಆನಂದಾನುಭವ ಪಡೆದವಳಂತೆ ಬಿದ್ದುಬಿಟ್ಟಳು. ಮೈಯೆಲ್ಲಾ ಬೆವತೂ ಹೋಗಿದ್ದಳು. ಕಡೆಗೆ ಸ್ವಾಮಿಗಳ ಬಳಿಬಂದು ತನ್ನ ತಪ್ಪಿಗೆ ಕ್ಷಮೆ ಬೇಡುತ್ತಾ, ಇನ್ನೆಂದಿಗೂ ಯಾರೊಂದಿಗೂ ಈರೀತಿಯ ಪರೀಕ್ಷೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದಳು, ಅಲ್ಲದೆ ಇನ್ನು ಮುಂದೆ ತಾನು ಜ್ಞಾನ–ವೈರಾಗ್ಯ ಸಾಧನೆಗಾಗಿ ಪ್ರಯತ್ನಿಸುತ್ತೇನೆ ಎಂದಳು.

**೬.ಇಂದ್ರಿಯನಿಗ್ರಹ – ಜಿತೇಂದ್ರಿಯರು** – ಒಮ್ಮೆ ಒಬ್ಬ ಮಲಯಾಳಿ ಬ್ರಾಹ್ಮಣನು, ಕೆಲವು ಸುಂದರ ತರುಣಿಯರೊಡನೆ ಬಂದು ಶ್ರೀಗಳವರನ್ನು ಜಿತೇಂದ್ರಿಯತ್ವದಲ್ಲಿ ಪರೀಕ್ಷಿಸಲು ಕೋರಿದರು. ಶ್ರೀಗಳು ಒಪ್ಪಿದರು. ಮಾರನೇ ದಿನ ಶ್ರೀಗಳು ಬಾಳೆ ಎಲೆಯ ನಾರಿನ ಕಟಿಸೂತ್ರವನ್ನು ಕಟ್ಟಿ, ಅದನ್ನೇ ತಮ್ಮ ಕೌಪೀನವಾಗಿ ಧರಿಸಿ, ಪರೀಕ್ಷೆಗೆ ಸಿದ್ಧರಾದರು. ಆ ಸ್ತ್ರೀಯರಾದರೋ ಶ್ರೀಗಳಿಗೆ ಅಭ್ಯಂಗನ ಸ್ನಾನ ಮಾಡಿಸಲು ಉದ್ಯುಕ್ತರಾಗಿ, ವಿಚಿತ್ರ ಶೃಂಗಾರ ಅಂಗಚೇಷ್ಟೆ ಮಾಡುತ್ತಾ, ಗಾನ ಮಾಡುತ್ತಾ, ಕುಣಿಯುತ್ತಾ, ತೈಲವನ್ನು ಲೇಪಿಸುತ್ತಾ ಶ್ರೀಯವರ ಮನಸ್ಸನ್ನು ಕಲುಷಿತಗೊಳಿಸಲು ಪ್ರಯತ್ನಿಸುತ್ತಿದ್ದರು. ಶ್ರೀಗಳಾದರೋ, ಶ್ರೀಮೂಲ ರಾಮದೇವರ ಪಾದಗಳಲ್ಲಿ ತಮ್ಮ ಮನಸ್ಸನ್ನು ನಿಲ್ಲಿಸಿ, ಶ್ರೀಹರಿಯ ಧ್ಯಾನ

ಮಾಡುತ್ತಾ, “ಶ್ರೀನಾರಾಯಣ” ಶಬ್ದಾರ್ಥ ವಿಚಾರವನ್ನು ಮಾಡುತ್ತಿದ್ದರು. ಶ್ರೀಗಳು ಮನಸ್ಸಿನಿಂದ ಸಾಕ್ಷಾತ್ ಮನ್ಮಥಮನ್ಮಥನಾದ ಶ್ರೀಹರಿಯನ್ನು ಧ್ಯಾನಿಸುತ್ತಾ, ವಾಗೀಂದ್ರಿಯವನ್ನು ಪರಾತ್ಪರ ತತ್ತ್ವವಿಚಾರದಲ್ಲಿಯೂ, ನೇತ್ರಗಳನ್ನು ಶ್ರೀಹರಿಯ ನಾನಾ ಅವತಾರ ನಿರೀಕ್ಷಣದಲ್ಲಿಯೂ, ಇಟ್ಟು, ಮದಮತ್ಸರಗಳನ್ನು ದೂರಮಾಡಿ, ಸ್ವಲ್ಪವೂ ವಿಕಾರ ಹೊಂದಲಿಲ್ಲ.

ಬಾಲಬ್ರಹ್ಮಚಾರಿಗಳಾದ ಶ್ರೀಗಳ ಅಸಾಧಾರಣ ಇಂದ್ರಿಯನಿಗ್ರಹ ಶಕ್ತಿಗೆ ಶರಣಾಗತರಾಗಿ ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ಆ ಕೇರಳ ಬ್ರಾಹ್ಮಣರು **“ವಿಜಯೀಂದ್ರ ಸಮೋ ಲೋಕೇ ನ ಭೂತೋ ನ ಭವಿಷ್ಯತಿ, ನಮ್ಮ ಅಜ್ಞಾನ ಮರೆಸಿ, ಕಣ್ಣು ತೆರೆಸಿದಿರಿ”** ನಮ್ಮನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದರು.

**೭. ಶೈವ ಸನ್ಯಾಸಿಗಳ ಪರಾಜಯ** – ಕುಂಭಕೋಣದಲ್ಲಿ ಸುಮಾರು ವರ್ಷಗಳಿಂದ ತಮ್ಮ ಪಾಂಡಿತ್ಯ, ಮಂತ್ರವಿದ್ಯೆಗಳ ಪ್ರಭಾವದಿಂದ ಒಬ್ಬ ಶೈವ ಸನ್ಯಾಸಿಯು ದೇವಾಲಯಾಧಿಪತ್ಯವನ್ನು ವಹಿಸಿ ವಿಪ್ರರನ್ನೆಲ್ಲ ಶೈವರನ್ನಾಗಿ ಮಾಡುತ್ತಿದ್ದರು. ವಿಜಯೀಂದ್ರರು ಕುಂಭಕೋಣಕ್ಕೆ ಬಂದಾಗ ಎಲ್ಲಿಲ್ಲದ ಸಡಗರ ಧಾರ್ಮಿಕರಿಗೆ. ವಿಜಯೀಂದ್ರರು ಬರುವುದನ್ನು ತಿಳಿದು ಆ ಶೈವಸನ್ಯಾಸಿಯು, “ಬರಲಿ, ಅವರನ್ನೂ ಶೈವರನ್ನಾಗಿ ಮಾಡುವ” ಎಂದರು.

## ೮. ಮಂತ್ರಕ್ಕೆ ಪ್ರತಿಮಂತ್ರ –

ಶ್ರೀವಿಜಯೀಂದ್ರರು ನಿಗದಿತ ಸ್ಥಳಕ್ಕೆ ತಮ್ಮ ಪಲ್ಲಕ್ಕಿಯಲ್ಲಿ ಕುಳಿತು ಹೊರಟರು. ಅದೇ ಸಮಯಕ್ಕೆ ಶೈವಸನ್ಯಾಸಿಗಳೂ ಮೇನೆಯಲ್ಲಿ ಬಂದರು. ಶೈವರ ಮುಖ್ಯಸ್ತರು ಬಸವರಾಜೇಂದ್ರ ಬಿರುದಾಂಕಿತ ಲಿಂಗರಾಜೇಂದ್ರರು. ಮಧ್ಯದಲ್ಲಿ ವಿಜಯೀಂದ್ರರನ್ನು ನೋಡಿದ ಅವರುಗಳು ಅಟ್ಟಹಾಸದಿಂದ ಮೇನೆಯಿಂದಿಳಿದು, ಅಲ್ಲಿಯೇ ಇದ್ದ ಅಡ್ಡಗೋಡೆಯಮೇಲೆ ವ್ಯಾಘ್ರಾಸನ ಹಾಕಿ ಕುಳಿತರು. ಮಂತ್ರಶಕ್ತಿಯಿಂದ ಗೋಡೆ ನಡೆಯಿತು.

ವಿಜಯೀಂದ್ರರು ಇದನ್ನು ನೋಡಿ ಪಲ್ಲಕ್ಕಿಯನ್ನು ಹೊತ್ತಿದ್ದ ಶಿಷ್ಯರನ್ನು ಕೆಳಗಿಳಿಸಲು ಆಜ್ಞಾಪಿಸಿದರು. ನಂತರ ಯಾರ ಸಹಾಯವೂ ಇಲ್ಲದೆ ಪಲ್ಲಕ್ಕಿ ಅಕಾಶ ಮಾರ್ಗಕ್ಕೆ ಹಾರಿತು. ಶ್ರೀಗಳು ಜಪನಿರತರಾಗಿದ್ದರು. ಪ್ರತಿವಾದಿಗಳ ಗೋಡೆ ನಡೆದು ಬರುತ್ತಿದ್ದರೆ, ಶ್ರೀಗಳ ಪಲ್ಲಕ್ಕಿ ಹಾರುತ್ತಿದೆ. ಹೀಗೆ ಮಂತ್ರಕ್ಕೆ ತಿರುಮಂತ್ರ ನೀಡಿದರು ಶ್ರೀ ವಿಜಯೀಂದ್ರರು. ಕುಂಭೇಶ್ವರ ದೇವಾಲಯದ ಮುಂದೆ ಪಲ್ಲಕ್ಕಿ ಇಳಿಯಿತು.

## ವಾದಸ್ಥಳ – ಕುಂಭೇಶ್ವರನ ಪ್ರಾಂಗಣ:-

ವಾದ-ಪ್ರತಿವಾದಕ್ಕೆ ಮೊದಲು ಪ್ರತಿಜ್ಞೆಯಾಗಬೇಕೆಂದರು ಪ್ರತಿವಾದಿಗಳು. ಶ್ರೀವಿಜಯೀಂದ್ರರು ಹೇಳಿದರು – "ನಾವು ಸೋತರೆ ನಮ್ಮ ಮಠದ ಗದ್ದುಗೆಯನ್ನೂ, ಸರ್ವದೇವಾಲಯಾಧಿಪತ್ಯವನ್ನೂ, ನಿಮಗೆ ಒಪ್ಪಿಸಿ ವೈಷ್ಣವ ಚಿಹ್ನೆಯನ್ನು ತ್ಯಜಿಸಿ, ಶೈವರಾಗಿ ನಿಮ್ಮ ಶಿಷ್ಯರಾಗುವೆವು" ಎಂದರು. ಆಗ ಶೈವರು " ನಾವು ಸೋತರೆ ಜನರನ್ನು ಬಲವಂತವಾಗಿ ಶೈವರನ್ನಾಗಿ ಮಾಡುವುದನ್ನು ನಿಲಿಸುತ್ತೇವೆ" ಎಂದರು. ಇವರೀರ್ವರ ವಾದ-ವಿವಾದಗಳು ಒಟ್ಟು ಹತ್ತು ದಿನ ನಡೆದು, ಪ್ರತಿದಿನದಲ್ಲೂ, ಪ್ರತಿ ಹಂತದಲ್ಲೂ, ಶ್ರೀವಿಜಯೀಂದ್ರರೇ ವಿಜಯಿಯಾಗಿದ್ದರು. ಯಾವುದೇ ಹಂತದಲ್ಲೂ ಲಿಂಗರಾಜರಿಗೆ ಮೇಲುಗೈ ಸಿಗಲಿಲ್ಲ.

- ಶೈವರು ಯುಕ್ತಿಯಿಂದ ಈಶ್ವರನನ್ನು ಸಾಧಿಸಲು ಸಾಧ್ಯವೆಂದರೆ, ವಿಜಯೀಂದ್ರರು ಯುಕ್ತಿಯಿಂದಲೇ ಈಶ್ವರನಿಲ್ಲವೆಂದೆ ಸಾಧಿಸಲೂ ಸಾಧ್ಯವೆಂದರು
- ವೇದಗಳು ಅಪೌರುಷೇಯವೆಂದು ಸಾಧಿಸಿ ತೋರಿಸಿದರು.
- ಶೈವರು ಕೆಲವು ವೇದವ್ಯಾಸರು ಬರೆದ ಪುರಾಣಗಳಲ್ಲೇ ಶಿವಸರ್ವೋತ್ತಮತ್ವ ಪ್ರತಿಪಾದನೆಯಾಗಿದಯಲ್ಲ ಎಂದಾಗ ಶ್ರೀವಿಜಯೀಂದ್ರರು, ಅವುಗಳನ್ನು ತಾಮಸ ಪುರಾಣಗಳೆಂದರು. ಆಗ ಶೈವರು ನಿಮಗೆ ಬೇಕಾದ ಪುರಾಣಗಳೆಲ್ಲ ಸಾತ್ವಿಕ,

ಬೇಡವಾದದ್ದೆಲ್ಲಾ ತಾಮಸವೇ? ಎನ್ನಲು, ಅದಕ್ಕೆ ಸಾಕ್ಷಿಯಾಗಿ ವೇದವ್ಯಾಸರ ವಾಕ್ಯವನ್ನೇ ಹೇಳಿದರು

**ವೈಷ್ಣವಂ ನಾರದೀಯಂ ಚ ತಥಾ ಭಾಗವತಂ ಶುಭಂ ।**
**ಗಾರುಡಂ ಚ ತಥಾ ಪಾದ್ಮಂ ವಾರಾಹಂ ಶುಭದರ್ಶನೆ ।**
**ಷಡೇತಾನಿ ಪುರಾಣಾನಿ ಸಾತ್ವಿಕಾನಿ ಮತಾನಿ ವೈ ॥**
**ಬ್ರಹ್ಮಾಂಡಂ ಬ್ರಹ್ಮವೈವರ್ತ್ಯಂ ಮಾರ್ಕಂಡೇಯಂ ತಥೈವ**
**ಚ। ಆಗ್ನೇಯಂ ಚ ಷಡೇತಾನಿ ತಾಮಸಾ ನಿರಯಪ್ರದಾ: ॥**

**ಅಂದರೆ ಸಾತ್ವಿಕ ಪುರಾಣಗಳು ಆರು** – ವೈಷ್ಣವ, ನಾರದೀಯ, ಪಾದ್ಮ, ಭಾಗವತ, ಗಾರುಡ, ವಾರಾಹ.

**ರಾಜಸ ಪುರಾಣಗಳು ಆರು –** ಬ್ರಹ್ಮಾಂಡ, ಬ್ರಹ್ಮವೈವರ್ತ, ವಾಮನ, ಮಾರ್ಕಂಡೇಯ, ಭವಿಷ್ಯೋತ್ತರ, ವಾಮನ, ಬ್ರಾಹ್ಮ

**ತಾಮಸ ಪುರಾಣಗಳು ಆರು** – ಮಾತ್ಸ್ಯ, ಕೌರ್ಮ, ಲೈಂಗ,
ಸ್ಕಾಂದ, ಶೈವ, ಆಗ್ನೇಯ.

ಈರೀತಿ ಹಲವಾರು ವಿಷಯಗಳಲ್ಲಿ ನಿರೂಪಿಸಿ ವಿಷ್ಣುಸರ್ವೋತ್ತಮತ್ವ ಪ್ರತಿಪಾದನ ಮಾಡಿದರು ವಿಜಯೀಂದ್ರರು. ಕಡೆಗೆ ಲಿಂಗರಾಜರು ಶರಣಾಗತರಾಗಿ ತಮ್ಮ ಮಠ, ಸಕಲ ಆಸ್ತಿಗಳನ್ನೂ, ಶ್ರೀಗಳಿಗೆಸಮರ್ಪಿಸಿ ಹೊರಡಲು ಅಪ್ಪಣೆ ಕೇಳಿದಾಗ, ಶ್ರೀಗಳು ಮಠದಲ್ಲಿರುವ ಸರ್ವಸ್ವವನ್ನೂ ನೀವು ತೆಗೆದುಕೊಂಡು ಹೋಗಬಹುದು. ಆದರೆ ಜಯಸೂಚಕ ನೀವು ಉಪಯೋಗಿಸುತ್ತಿದ್ದ ಘಂಟೆಯನ್ನು ಮತ್ತು ವಿಜಯನಗರದ ಅರಸರು ನಿಮಗೆ ಕೊಟ್ಟಿದ್ದ ತಾಮ್ರಶಾಸನವನ್ನು ಮಾತ್ರ ನಾವು ತೆಗೆದುಕೊಳ್ಳುವೆವು" ಎಂದರು

**೯. ಹನುಮನಾದ ಬಸವ** – ಕುಂಭಕೋಣದಲ್ಲಿ ಶ್ರೀ ವಿಜಯೀಂದ್ರರಿಂದ ಪರಾಜಿತರಾಗಿ ಅನ್ಯದೇಶಕ್ಕೆ ಹೋಗಿ ನೆಲೆಸಿದರು ಶ್ರೀ ಲಿಂಗರಾಜೇಂದ್ರರು. ಆದರೆ ಅವರ ಶಿಷ್ಯರಲ್ಲೊಬ್ಬರು ಮಾತ್ರ ಕುಂಭಕೋಣದ

ಹೊರಭಾಗದಲ್ಲಿ ನೆಲೆಸಿದ್ದನು. ಕುಂಭಕೋಣದ ಸಕಲ ದೇವಾಲಯಗಳ ಆಡಳಿತಕ್ರಮ ಶ್ರೀವಿಜಯೀಂದ್ರರ ಮೇಲ್ವಿಚಾರಣೆಯಲ್ಲಿ ಜರುಗುತ್ತಿತ್ತು. ದ್ವೈತ-ಅದ್ವೈತ-ವಿಶಿಷ್ಟಾದ್ವೈತಾದಿ ಮತೀಯರೆಲ್ಲರೂ ಆತ್ಮೀಯಭಾವನೆಯಿಂದ ಅಣ್ಣತಮ್ಮಂದಿರಂತೆ ಇರುತ್ತಿದ್ದರು. ಹೀಗಿರುವಾಗ ಶೈವ ಮತದವರು ಇವರುಗಳ ಮಧ್ಯೆ ವೈರವನ್ನು ಬಿತ್ತಲು ಪ್ರಾರಂಭಿಸಿದರು. ಕುಂಭೇಶ್ವರ ಮತ್ತು ಸಾರಂಗಪಾಣಿ ದೇವಾಲಯಗಳ ಮಧ್ಯೆ ಒಂದು ಸರೋವರವಿದೆ. ಪ್ರಾಚೀನ ಕಾಲದಿಂದ ಅದು ಸಾರಂಗಪಾಣಿ ಗುಡಿಗೆ ಸೇರಿತ್ತು. ಶೈವರ ಕುತಂತ್ರದಿಂದ ಕುಂಭೇಶ್ವರನ ಗುಡಿಗೇ ಅದು ಸೇರಬೇಕೆಂದು ಕೆಲವರು ವಾದವನ್ನಿಟ್ಟರು. ಇದರಿಂದ ಅದ್ವೈತ-ವಿಶಿಷ್ಟಾದ್ವೈತಿಗಳಲ್ಲಿ ದೊಡ್ಡ ವಾಗ್ವಾದ-ದ್ವೇಷ-ಅಸೂಯೆ ಬೆಳೆಯಿತು. ಉಭಯ ಪಂಗಡದವರೂ ಶ್ರೀಗಳವರನ್ನು ಭೇಟಿ ಮಾಡಿ ವಿಚಾರ ತಿಳಿಸಲು, ಶ್ರೀಗಳು ನ್ಯಾಯವಾಗಿ ಈ ಸರೋವರ ಸಾರಂಗಪಾಣಿಗುಡಿಗೇ ಸೇರಿದ್ದೂ, ಆದರೂ, ಎಲ್ಲರಿಗೂ ಅನುಕೂಲವಾಗುವಂತೆ, ಆ ಸರೋವರವನ್ನು ಉಭಯ ದೇವಾಲಯದವರೂ ಉಪಯೋಗಿಸಬೇಕೆಂದು ತೀರ್ಮಾನ ಕೊಟ್ಟರು. ಎಲ್ಲರೂ ಒಪ್ಪಿದರು.

ಆದರೆ ಕೆಲವು ದಿನಗಳ ತರುವಾಯ, ಈ ಶೈವರು ಮತ್ತೆ ಕುಂಭೇಶ್ವರ ದೇವಾಲಯದ ಅರ್ಚಕರಿಗೆ ವಿಷಭೀಜ ಬಿತ್ತಲು, ಅವರು ಇಡೀ ಸರೋವರ ನಮಗೇ ಬರಬೇಕೆಂದು ವಾದ ಮಂಡಿಸಿದರು. ಆಗ ಶ್ರೀಗಳು ಹೇಳಿದರು "ಈಗ ಇಬ್ಬರೂ ಉಪಯೋಗಿಸುತ್ತಿದ್ದೀರಿ. ಅಕಸ್ಮಾತ್ ಮುಂದೆ ವಾಗ್ವಾದದಲ್ಲಿ ಈ ಸರೋವರ ವೈಷ್ಣವರಿಗೇ ಬರಬೇಕೆಂದು ಸಮ್ಮತವಾದರೆ, ತಮಗೆ ಇದರ ಅಧಿಕಾರವೇ ಇರುವುದಿಲ್ಲ, ಮತ್ತೊಮ್ಮೆ ಯೋಚಿಸಿ" ಎಂದು ಶೈವರಿಗೆ ಹೇಳಿದರು. ಆದರೆ ಅವರು ಅದಕ್ಕೆ ಒಪ್ಪದೇ ತಮಗೇ ಸಂಪೂರ್ಣ ಅಧಿಕಾರ ಕೇಳಿದರು. ಆಗ ಶ್ರೀಗಳು ಹೇಳಿದರು "ನಿಮ್ಮ ವಾದದಂತೆ ಈ ಸರೋವರದಲ್ಲಿ ಶೈವಚಿಹ್ನೆಗಳೇ ಜಾಸ್ತಿಯಿದ್ದರೆ ಈ ಜಾಗ ಶೈವರಿಗೆ, ಅಥವಾ ವೈಷ್ಣವ ಚಿಹ್ನೆಯಿದ್ದರೆ ವೈಷ್ಣವರಿಗೆ" ಎಂದರು. ಶೈವಸನ್ಯಾಸಿಗಳ ಶಿಷ್ಯರು ಅಂದು ರಾತ್ರಿಯೇ ಸರೋವರದ ಬಳಿ ಹೋಗಿ ತಾವೇ ಸಿದ್ಧಪಡಿಸಿದ್ದ ಸಾವಿರಾರು ಕಲ್ಲಿನ ಲಿಂಗಗಳು, ಬಸವಣ್ಣನನ್ನು ಸರೋವರದಲ್ಲಿ ಹಾಕಿದರು.

ಶ್ರೀಗಳು ಮರುದಿನ ಉಭಯಪಕ್ಷಗಳ ನಾಲ್ಕಾರು ಜನರನ್ನು ಸರೋವರದಲ್ಲಿ ಮುಳುಗಿ ಏನಾದರೂ ಚಿಹ್ನೆ ದೊರಕಿದರೆ ಮೇಲೆ ತರಲು ಹೇಳಿ, ಆ ಸರೋವರಕ್ಕೆ ಅಭಿಮಂತ್ರಿಸಿ, ಮಂತ್ರಾಕ್ಷತೆಯನ್ನು ಹಾಕಿದರು. ಅದರಂತೆ ಅವರು ಕೆಳಗಿಳಿದು ಹುಡುಕಿದಾಗ, ಅಲ್ಲಿ ನೂರಾರು ಹನುಮ ವಿಗ್ರಹಗಳು, ಸಾಲಿಗ್ರಾಮಗಳು ದೊರೆತವು. ಹತ್ತಾರುಬಾರಿ ಹುಡುಕಿದರೂ ಅಲ್ಲಿ ದೊರಕಿದ್ದುದೆ ಸಾಲಿಗ್ರಾಮ–ಹನುಮ ವಿಗ್ರಹಗಳೇ. ಆ ಶೈವರು ಹಾಕಿದ್ದ ಬಸವನ ವಿಗ್ರಹಗಳೆಲ್ಲ ಹನುಮನ ವಿಗ್ರಹವಾಗಿತ್ತು. ಕಲ್ಲಿನ ಲಿಂಗಗಳು ಸಾಲಿಗ್ರಾಮಗಳಾಗಿತ್ತು. ಶೈವರು ಪರಾಜಿತರಾಗಿ, ಇಡೀ ಸರೋವರದ ಹಕ್ಕು ವೈಷ್ಣವರಿಗೆ ಮಾತ್ರ ದೊರೆಯಿತು.

**೧೦. ಸಂಗೀತದಲ್ಲಿಯೂ ಶ್ರೇಷ್ಠತ್ವ** – ಒಮ್ಮೆ ಉತ್ತರಭಾರತದ ಪ್ರಖ್ಯಾತ ವಿದ್ವಾಂಸನಾದ ತಾನಸೇನನ ಶಿಷ್ಯ, ಇವರ ಚತು:ಷಷ್ಟಿ ವಿದ್ಯಾಕಲೆಯಲ್ಲಿ ಪರಿಣಿತರಾಗಿರುವ ವಿಷಯ ತಿಳಿದು, ಸಂಗೀತದಲ್ಲಿ ಪರೀಕ್ಷಿಸಲು ಬಂದಾಗ, ಶ್ರೀಗಳು ಅವನು ನಿಬ್ಬೆರಗಾಗುವಂತೆ ಸಂಗೀತ ಹಿರಿಮೆಯನ್ನು ತೋರಿ, ಕುಂಭಕೋಣದ ಜನತೆಗೆ ಅತ್ಯಾಶ್ಚರ್ಯವನ್ನು ನೀಡಿದರು.

**೧೧. ನೇಯ್ಗೆಯಲ್ಲಿ ಪರಿಣಿತಿ** – ಒಮ್ಮೆ ಭಾರತದೇಶದಲ್ಲಿ ಪೀತಾಂಬರಗಳನ್ನು ತಯಾರಿಸುವುದರಲ್ಲಿ ಪ್ರಖ್ಯಾತನಾದ ಒಬ್ಬನು ವಿಜಯೀಂದ್ರರನ್ನು ಪರೀಕ್ಷಿಸಲು ಬಂದಾಗ, ಅವನು ಕಾಶ್ಮೀರವಾಸಿಯ ಕಲಾಕೌಶಲ್ಯವನ್ನು ಪ್ರದರ್ಶಿಸಿದರೆ, ಶ್ರೀಗಳು ಹರಿಸ್ಮರಣೆಯಿಂದ, ವರ್ಣರಂಜಿತವಾದ ರೇಷ್ಮೇದಾರ, ಜರಿಗಳನ್ನು ಸಂಯೋಜನ ಮಾಡುತ್ತಾ, ನಾಲ್ಕೈದು ಘಂಟೆಗಳಲ್ಲಿಯೇ ಒಂದು ಸಣ್ಣ ಪೀತಾಂಬರವನ್ನು ನೇಯ್ದು ಪ್ರದರ್ಶಿಸಿದರು. ಆ ಕಲೆಗಾರ ಶ್ರೀಪಾದರ ಮಹಿಮೆಯನ್ನು ಕೊಂಡಾಡುತ್ತಾ ತನ್ನನ್ನು ಕ್ಷಮಿಸಬೇಕೆಂದು ಕೋರಿದನು.

## ೧೨. ಅಪ್ಪಯ್ಯ ದೀಕ್ಷಿತರೊಡನೆ ಸಮಾಗಮ –

ಅಪ್ಪಯ್ಯದೀಕ್ಷಿತರು ಅಸಾಮಾನ್ಯ ಪಂಡಿತರು. ಅದ್ವೈತಮತ ಸ್ಥಾಪನಾಚಾರ್ಯರಾದ ಶ್ರೀಶಂಕರರು ಮತ್ತು ಶ್ರೀವಿದ್ಯಾರಣ್ಯರ ನಂತರ ಅಪ್ಪಯ್ಯದೀಕ್ಷಿತರಂತ ಮಹಾಸಮರ್ಥ ಪಂಡಿತರು ಮತ್ತೊಬ್ಬರಿಲ್ಲ.

**"ಅಸ್ತರಣ್ಯಂ ತರಣ್ಯಂಘ್ರಿ ಸರಣ್ಯಂತರ್ಧಿ ಪಾದಪಂ" -**

**"ದರೀಸುಪ್ತರ್ಝುರೀದತ್ತಪರೀರಂಭಸರೀಸೃಪಂ".**

ಒಮ್ಮೆ ಶ್ರೀವಿಜಯೀಂದ್ರತೀರ್ಥರೂ ಮತ್ತು ಶ್ರೀ ಅಪ್ಪಯ್ಯದೀಕ್ಷಿತರೂ ಮಾರ್ಗಮಧ್ಯದಲ್ಲಿ ಸಿಕ್ಕಾಗ, ಯಾರು ಯಾರಿಗೆ ದಾರಿಕೊಡಬೇಕೆಂಬುದನ್ನು ತೀರ್ಮಾನಿಸಬೇಕಾಯಿತು. ಆಗ ದೀಕ್ಷಿತರು "ನಾವಿಬ್ಬರೂ ಒಂದು ಅನುಷ್ಟುಪ್ ಛಂದಸ್ಸಿನಲ್ಲಿ ಈ ವನವನ್ನು ವರ್ಣಿಸಬೇಕು. ಯಾರದು ಹೆಚ್ಚು ಪ್ರಾಸಬದ್ಧವೋ ಸ್ವಾರಸ್ಯವೋ ಅವರಿಗೆ ಇನ್ನೊಬ್ಬರು ದಾರಿ ಕೊಡಬೇಕು" ಎಂದರು. ಶ್ರೀಗಳು ಒಪ್ಪಿದರು. ಆಗ ಅಪ್ಪಯ್ಯದೀಕ್ಷಿತರು "ಅಸ್ತರಣ್ಯಂ ತರಣ್ಯಂಘ್ರಿ ಸರಣ್ಯಂತರ್ಧಿ ಪಾದಪಂ" - ಎಂದರೆ ಈ ವನವು ಸೂರ್ಯನ ಕಿರಣಗಳ ಮಾರ್ಗವನ್ನು ಮರೆ ಮಾಡುವ ಗಗನಚುಂಬಿಗಳಾದ ಸಾಂದ್ರವಾದ ವೃಕ್ಷಗಳಿಂದ ಶೋಭಿಸುತ್ತಿದೆ.

ಆಗ ಶ್ರೀಗಳು **"ದರೀಸುಪ್ತರ್ಝುರೀದತ್ತಪರೀರಂಭಸರೀಸೃಪಂ".** – ಎಂದರೆ " ಹುತ್ತದೊಳು ಪವಡಿಸಿದ ಉರಗ ನೀಡಿದ ಮಧುರ ಸುಮೃದು ಆಲಿಂಗನದಿಂದ ಸುಖಿಪ ಭುಜಗ ಸಮೂಹದಿಂದ ವನವು ರಾಜಿಸುವುದು". ಕಾವ್ಯನಾಟಕಾಲಂಕಾರಗಳಲ್ಲಿ ನಿಪುಣರಾದ ಅನೇಕ ಪಂಡಿತರು ಉಭಯರ ಕವಿತೆಗಳನ್ನು ವಿಮರ್ಶಿಸಿ ದೀಕ್ಷಿತರ ಕವಿತೆಯಲ್ಲಿ ಅರಣ್ಯ, ತರಣಿ, ಸರಣಿ ಎಂಬ ಮೂರು ಪ್ರಾಸವಿದೆ, ಆದರೆ ಶ್ರೀಗಳ ಕವಿತೆಯಲ್ಲಿ ದರೀ, ಝುರೀ, ಪರೀ, ಸರೀ ಎಂಬ ನಾಲ್ಕು ಪ್ರಾಸಗಳಿವೆ. ಆದ್ದರಿಂದ ವಿಜಯೀಂದ್ರರೇ ಗೆದ್ದರು ಎಂದು ತೀರ್ಮಾನಿಸಿದರು. ಶ್ರೀ ವಿಜಯೀಂದ್ರರಿಗೆ ದಾರಿಕೊಟ್ಟರು ಅಪ್ಪಯದೀಕ್ಷಿತರು.

## ೧೩. ಸರ್ಪಕ್ರೀಡೆಯಲ್ಲೂ ಜಯ –

ಒಮ್ಮೆ ಒಬ್ಬ ಹಾವಾಡಿಗನು ಶ್ರೀವಿಜಯೀಂದ್ರತೀರ್ಥರನ್ನು ಪರೀಕ್ಷಿಸಲು ಬಂದನು. ಅವನು ಒಂದು ದೊಡ್ಡ ಹಾವನ್ನು ಹೊರಗೆ ಬಿಟ್ಟು ತನ್ನ ಪುಂಗಿಯನ್ನು ಊದಿ ಪುಂಗಿಯ ಧ್ವನಿಗೆ ತಕ್ಕಂತೆ ಹಾವು ಕುಣಿಸಲಾರಂಭಿಸಿದನು. ನಂತರ ಆ ಪುಂಗಿಯನ್ನು ಶ್ರೀಗಳವರ ಮುಂದೆ ಎಸೆದು ನೀವೂ ಹಾವನ್ನು ಆಟವಾಡಿಸಿರೆಂದನು. ಆಗ ಶ್ರೀಗಳು ತನ್ನ ಶಿಷ್ಯನಮೂಲಕ ಒಂದು ಕೊಳಲನ್ನು ತರಿಸಿಕೊಂಡು ಸುಮಾರು ಅರ್ಧ ಘಂಟೆಗಳ ಕಾಲ ಕೊಳಲನ್ನೂದಿ ಹಾವನ್ನು ಆಡಿಸಿದರು. ಎಲ್ಲಾ ಜನರೂ ಪುಂಗಿಯ ಬದಲು ಕೊಳಲನ್ನು ಉಪಯೋಗಿಸಿ ಗೆದ್ದ ಬಗೆ ನೋಡಿ ಪುಳಕಿತರಾದರು. ಆಗ ಆ ಹಾವಾಡಿಗನು ತನ್ನ ಸೋಲನ್ನು ಒಪ್ಪದೆ, "ಸ್ವಾಮಿ ನನ್ನ ಬಳಿ ಅತ್ಯಂತ ವಿಷಪೂರಿತ ಹಾವುಗಳಿವೆ. ಈ ಎಲ್ಲ ಸರ್ಪಕ್ಕೂ ಅದರದೇ ಆದ ವಿಶೇಷ ಬೇರೆ ಬೇರೆ ಬಗೆಯಾದ ವಾದನವೇ ಆಗಬೇಕು. ನಾನು ಆಡಿಸುತ್ತೇನೆ, ನಿಮಗಿದು ಸಾಧ್ಯವೇ?" ಎನ್ನಲು, ಶ್ರೀಗಳು "ನೀನು ಒಂದೊಂದೇ ಬೇರೆ ಬೇರೆ ವಾದನವ ನುಡಿಸಿ ಹಾವುಗಳನ್ನು ಆಡಿಸುತ್ತೀ. ನಾನು ಈ ಎಲ್ಲಾ ಹಾವುಗಳನ್ನೂ ಒಂದೇ ಸಮನೆ ಒಂದೇ ವಾದನದಿಂದ ಆಡಿಸಬಲ್ಲೆ" ಎನ್ನಲು ಆ ಹಾವಾಡಿಗನು ಭ್ರಾಂತನಾದನು. ಶ್ರೀಗಳು "ನಮ್ಮ ರಕ್ಷಣೆಯ ಭಾರ ಶ್ರೀಹರಿಗೆ ಸೇರಿದ್ದು. ನನ್ನ ಬಗ್ಗೆ ಚಿಂತಿಸಬೇಡ. ಆ ವಿಷಸರ್ಪಗಳನ್ನು ಬಿಡು" ಎಂದರು. ಆಗ ಆ ಹಾವಾಡಿಗನು ಏಳೆಂಟು ದೊಡ್ಡದಾದ ವಿಷಸರ್ಪಗಳನ್ನು ಬಿಡಲು, ಶ್ರೀಗಳು ಇಂಪಾದ ಮುರಳಿ ನಾದವನ್ನು ನುಡಿಸಲು, ಆ ಎಲ್ಲ ಹಾವುಗಳೂ ಒಟ್ಟಿಗೆ ನರ್ತಿಸತೊಡಗಿದವು. ಹಾವಾಡಿಗನು ಈಗಲೂ ಸೋಲೊಪ್ಪಲಿಲ್ಲ. "ನನ್ನ ಬಳಿ ಮಹಾಕೃಷ್ಣ ಸರ್ಪವಿದೆ ಅದನ್ನು ಜಯಿಸಿ ನೋಡೋಣ"ವೆನಲು, ಶ್ರೀಗಳು ತಮ್ಮ ಶಿಷ್ಯನ ಕರದಲ್ಲಿದ್ದ ತಮ್ಮ ದಂಡವನ್ನು ತೆಗೆದುಕೊಂಡು ಒಂದು ವರ್ತುಲವನ್ನು ಹಾಕಿ ದಂಢದಾರಿಯಾಗಿ ನಿಂತರು. ಆ ಕೃಷ್ಣಸರ್ಪವಾದರೋ ಶಾಂತರಾಗಿ ನಿಂತಿದ್ದ ಶ್ರೀಗಳ ಮೇಲೆ ರಭಸದಿಂದ ಮುನ್ನುಗ್ಗಿ ಶ್ರೀಗಳವರು ಹಾಕಿದ್ದ ವರ್ತುಲದ ಹತ್ತಿರ ಬಂದು

ಮುಂದುವರಿಯಲಾರದೆ ಸಿಟ್ಟಿನಿಂದ ಹೆಡೆಯಪ್ಪಳಿಸುತ್ತಾ ನಿಂತಿತು. ಅದು ಆ ವರ್ತುಲವನ್ನು ಸುತ್ತಿ ಸುತ್ತಿ ಸುಸ್ತಾಗಿ ಅಲ್ಲೇ ಮಲಗಿಬಿಟ್ಟಿತು. ನಂತರ ಶ್ರೀಗಳವರು ಆ ಹಾವಾಡಿಗನನ್ನು ಕುರಿತು, ನಾನು ನಿನ್ನ ಮೇಲೆ ನಿನ್ನದೇ ಹಾವನ್ನು ಕಳಿಸುತ್ತೇನೆ, ಈಗ ನಿನ್ನ ಸರದಿ, ನೀನು ಈ ಹಾವಿನಿಂದ ತಪ್ಪಿಸಿಕೋ, ಎಂದು ಹೇಳಿ ಆ ಸರ್ಪವನ್ನು ಆ ಹಾವಾಡಿಗನ ಕಡೆಗೆ ತಮ್ಮ ದಂಡದಿಂದ ನೂಕಲು ಅದು ಅವನನ್ನೇ ಅಟ್ಟಿಸಿಕೊಂಡು ಹೋಯಿತು. ಅವನಾದರೋ ಪ್ರಾಣಭಯದಿಂದ "ಸ್ವಾಮಿ, ನನ್ನನ್ನು ರಕ್ಷಿಸಿರಿ" ಎನ್ನಲು, ಶ್ರೀಗಳವರು ಗರುಡಮಂತ್ರವನ್ನು ಜಪಿಸಿದಾಗ, ಎಲ್ಲರಿಗೂ ಆಶ್ಚರ್ಯವಾಗುವಂತೆ, ಒಂದು ಗರುಡಪಕ್ಷಿ ಬಂದು ಆ ಹಾವಾಡಿಗನ ಮೇಲೆ ನುಗ್ಗುತ್ತಿದ್ದ ಸರ್ಪವನ್ನು ಕಚ್ಚಿಕೊಂಡು ಹಾರಿಹೋಯಿತು. ಕಡೆಗೆ ಆ ಹಾವಾಡಿಗನು ಸೋಲೊಪ್ಪಿಕೊಂಡನು.

**೧೪. ನಾರಾಯಣ – "ಣ"ತ್ವಂ ಪರಂ ಬಾಧತೇ ।** ಒಮ್ಮೆ ಅಪ್ಪಯ್ಯದೀಕ್ಷಿತರು ಶ್ರೀಗಳಿಗೆ ನಮಸ್ಕರಿಸಿದಾಗ ವಿಜಯೀಂದ್ರರು "ನಾರಾಯಣ" ಎಂದರು. ಆಗ ನಾರಾಯಣ ಶಬ್ದದ ಬಗ್ಯೆ ವಾಗ್ವಾದ ನಡೆಯಿತು. ಶ್ರೀವಿಜಯೀಂದ್ರರು "ನಾರಾಯಣೋ ವಾ ಇದ್ರಮಗ್ರ ಆಸೀತ್", "ನಾರಾಯಣೋ ಇದಮಗ್ರ ಆಸೀತ್ ಬ್ರಹ್ಮಾನ ಚ ಶಂಕರ:" ಇತ್ಯಾದಿ ಶ್ರುತಿಗಳಿರುವುದರಿಂದ ನಾರಾಯಣನೊಬ್ಬನೇ ಪ್ರಳಯಕಾಲದಲ್ಲಿದ್ದನೆಂದು ಪ್ರತಿಪಾದನ ಮಾಡಿದರು. ಆಗ ಅಪ್ಪಯ್ಯದೀಕ್ಷಿತರು ನಾರಾಯಣ ಶಬ್ದವನ್ನು ಶಿವಪರವೆಂದು ಪ್ರತಿಪಾದನಮಾಡಲು ಪ್ರಯತ್ನಿಸಿದಾಗ, ನಾರಾಯಣ ಪದದ ಕಡೆಯ ಪದ "ನ" ಕಾರ ಬರದೆ "ಣ" ವಿರುವುದರಿಂದ ಶಿವಪರತ್ವ ಅಸಂಭಾವಿತವೆಂದು ಪ್ರತಿಪಾದಿಸಿದರು ವಿಜಯೀಂದ್ರರು. ಈ ರೀತಿಯಲ್ಲಿ ತಿಂಗಳುಗಟ್ಟಲೆ ವಾಕ್ಯಾರ್ಥವಾಯಿತು. ಕೊನೆಗೆ ಅಪ್ಪಯ್ಯ ದೀಕ್ಷಿತರು ತಮ್ಮ ಸೋಲೊಪ್ಪಿಕೊಂಡರು. ನಿರ್ಮಾತ್ಸರ್ಯ ಹೃದಯಿಗಳಾದ ಶ್ರೀಗಳು ಅವರಿಗೆ ಅವರ ವಿದ್ಯಾ, ಪಾಂಡಿತ್ಯವನ್ನು ವಿಶ್ವಾಸಾದಿಗಳನ್ನು ಶ್ಲಾಘಿಸಿ

ವಿಶೇಷ ಮರ್ಯಾದೆಯನ್ನು ಮಾಡಿ ಫಲಮಂತ್ರಾಕ್ಷತೆ ನೀಡಿ ಅನುಗ್ರಹಿಸಿದರು.

## ೧೫. ಭವಿಷ್ಯಕಥನದಲ್ಲೂ ಜಯಭೇರಿ –

ಒಮ್ಮೆ ಕೇರಳ ದೇಶದ ಪ್ರಭಂಜನಶರ್ಮ ಎಂಬ ಬ್ರಾಹ್ಮಣನು ಶ್ರೀಗಳನ್ನು ಜ್ಯೋತಿಷ್ಯ ವಿಷಯದಲ್ಲಿ ಪರೀಕ್ಷಿಸಲು ಬಂದನು. ಅವರಿಬ್ಬರೂ "ನಾಳೆ ನಡೆಯಬಹುದಾದ ವಿಷಯವನ್ನು ಇಂದೇ ಬರೆದಿಟ್ಟು ಮುಚ್ಚಿಡಬೇಕು" ಎಂದು ನಿರ್ಧರಿಸಿ, ಅದನ್ನು ಒಬ್ಬ ಪ್ರಮುಖ ನಾಗರಿಕರೊಬ್ಬರ ವಶಕ್ಕೆ ಒಪ್ಪಿಸಿದರು. ಮಾರನೇ ದಿನ ಸಂಜೆ ದೀಪೋತ್ಸವದ ಹೊತ್ತಿಗೆ ಅದನ್ನು ಒಡೆಯಬೇಕೆಂದು ತೀರ್ಮಾನವಾಯಿತು.

ಮಾರನೇ ದಿನ ಬೆಳಿಗ್ಯೆ ೧೦ ಘಂಟೆಗೆ ರಾಜಕುಮಾರ ಅಚ್ಯುತಪ್ಪನಾಯಕ ಭಕ್ತಿಪೂರ್ವಕವಾಗಿ ನಮಿಸಿ ಅನರ್ಘ್ಯ ನವರತ್ನ ಧನಕನಕ ವಸ್ತ್ರಗಳನ್ನರ್ಪಿಸಿ ಸಿದ್ಧಪಡಿಸಿಕೊಂಡು ತಾಮ್ರಶಾಸನವನ್ನು ಶ್ರೀಗಳಿಗೆ ಸಮರ್ಪಿಸಿದನು.
ಸಂಜೆ ಪೂಜಾಸಮಯದಲ್ಲಿ ಪರೀಕ್ಷೆಗೆ ಉತ್ತರವನ್ನು ನಿರೀಕ್ಷಿಸಿ ಬಂದಿದ್ದ ನೂರಾರು ಜನರ ಸಮ್ಮುಖದಲ್ಲಿ ಪ್ರಭಂಜನಶರ್ಮರ ಎದುರಿನಲ್ಲಿ ಆ "ಭವಿಷ್ಯದ ಬರಹವನ್ನು ಹೊರತೆಗೆದು ಓದಿ"ರೆಂದು ಶ್ರೀಗಳು ಆಜ್ಞಾಪಿಸಲು, ಅದರಲ್ಲಿ ಶರ್ಮರು ಹೀಗೆ ಬರೆದಿದ್ದಾರೆ. – "ನಾಳೆ ಬೆಳಿಗ್ಯೆ ರಾಜಸಂಬಂಧಿಯೊಬ್ಬರು ಶ್ರೀಯವರಿಗೆ ಒಂದು ದಾನಪತ್ರವನ್ನು ಸಮರ್ಪಿಸುತ್ತಾರೆ" ಎಂದಿತ್ತು. ಆ ಭವಿಷ್ಯ ನಿಜವಾಗಿತ್ತು. ನಂತರ ಶ್ರೀಗಳ ಪತ್ರವನ್ನು ಓದಲಾಯಿತು. ಅದರಲ್ಲಿ ನಾಳೆ ನಮಗೆ ತಂಜಾಪುರದ ರಾಜಕುಮಾರರು ಗ್ರಾಮದಾನ ಮಾಡಿ ತಾಮ್ರಶಾಸನವನ್ನು ಸಮರ್ಪಿಸುತ್ತಾರೆ. ನಾಳೆ ನಮ್ಮ ಭವಿಷ್ಯ ಬರಹವನ್ನು ಓದಿ ಮುಗಿಸುವ ವೇಳೆಗೆ ತಂಜಾಪುರದಿಂದ ಪ್ರಭಂಜನಶರ್ಮರ ಮಿತ್ರರೊಬ್ಬರು ಬಂದು ಶರ್ಮರಿಗೆ ಪುತ್ರೋತ್ಪತ್ತಿಯಾದ ಶುಭ ಸಮಾಚಾರವನ್ನು ಹೇಳುತ್ತಾರೆ. ಇದು ನಿಜ ಎಂದಿತ್ತು. ಅಷ್ಟುಹೊತ್ತಿಗೆ ಅಲ್ಲಿದ್ದ ಸಭಿಕರ ಮಧ್ಯೆ ದಾರಿಮಾಡಿಕೊಂಡು

ಮಧ್ಯವಯಸ್ಕ ಬ್ರಾಹ್ಮಣರೊಬ್ಬರು ಪ್ರಭಂಜನಶರ್ಮರಿಗೆ ಪುತ್ರೋತ್ಪತ್ತಿಯಾದ ವಿಷಯ ತಿಳಿಸಿದರು. ಇದರಿಂದ ಶ್ರೀಯವರ ಜ್ಯೋತಿಷ್ಯ ಪ್ರಾವೀಣ್ಯತೆಯನ್ನು ಕಂಡು ಆನಂದಾತಿರೇಕದಿಂದ ಎಲ್ಲರೂ ವಿಸ್ಮಯಗೊಂಡರು.

**೧೬. ಕಾಶೀಮಠ – ಸಾರಸ್ವತ ಧರ್ಮಪೀಠ ಸ್ಥಾಪನೆ –** ಶ್ರೀ ವಿಜಯೀಂದ್ರತೀರ್ಥರು ಕೊಚ್ಚಿಯಲ್ಲಿ ಸಾರಸ್ವತ ಜನಾಂಗದ ಕೋರಿಕೆಯಂತೆ ಶ್ರೀಕೇಶವ ದೇವರ ಪ್ರತಿಷ್ಟೆಯನ್ನು ನೆರವೇರಿಸಿದರು. ಸಾರಸ್ವತ ಮನೆತನದವರು ತಮ್ಮ ಕುಲಗುರುಗಳು ದೂರದೇಶದಲ್ಲಿರುವುದರಿಂದ ತಮ್ಮ ಪಂಗಡದವರಿಗೆ ಮುದ್ರಾ-ಗುರೂಪದೇಶಾದಿಗಳು ಸತತ ದೊರಕುವಂತಾಗಲು ತಮಗಾಗಿಯೇ ಒಂದು ಧರ್ಮಪೀಠವನ್ನು ಸ್ಥಾಪಿಸಲು ಕೋರಿ ಶ್ರೀಸುರೇಂದ್ರತೀರ್ಥರನ್ನು ಪ್ರಾರ್ಥಿಸಿದಾಗ, ಶ್ರೀ ಸುರೇಂದ್ರರ ಅಣತಿಯಂತೆ ಶ್ರೀವಿಜಯೀಂದ್ರರು, ಹಿಂದೆ ತಮ್ಮಲ್ಲಿ ವ್ಯಾಸಂಗ ಮಾಡಿ ಉತ್ತಮ ಪಂಡಿತರಾಗಿದ್ದ ಓರ್ವ ತೇಜಸ್ವೀ ಪಂಡಿತರನ್ನು ಸಾರಸ್ವತ ಪಂಗಡದವರ ಅಭಿಲಾಷೆಯಂತೆ ಆರಿಸಿ ಚಾತುರ್ಮಾಸ್ಯ ಸಂಕಲ್ಪವು ಪರಿಸಮಾಪ್ತಿಯಾದ ಮೇಲೆ ಅವರನ್ನು ಕಾಶಿಗೆ ಕರೆದೊಯ್ದು ಅಲ್ಲಿ ಅವರಿಗೆ ಸನ್ಯಾಸ ಪ್ರಧಾನ ಮಾಡಿ "ಶ್ರೀ ಯಾದವೇಂದ್ರತೀರ್ಥ"ರೆಂದು ನಾಮಕರಣಮಾಡಿ, ಮಂತ್ರ ಮುದ್ರಾಧರಣ, ಗುರೂಪದೇಶಗಳನ್ನು ನೀಡಿ ಅವರನ್ನು ಸಾರಸ್ವತ ಬ್ರಾಹ್ಮಣ ಪಂಗಡದ ಗುರುಗಳನ್ನಾಗಿ ಮಾಡಿದರು. ಶ್ರೀಕಾಶಿ ಮಠದವರು ಶ್ರೀ ವಿಜಯೀಂದ್ರರೇ ತಮ್ಮ ಮಠದ ಸ್ಥಾಪಕ ಗುರುಗಳೆಂದು ಇಂದಿಗೂ ತಮ್ಮ ಪೀಠದ ಇತಿಹಾಸವನ್ನು ಹೇಳುತ್ತಾರೆ.

**೧೭. ವೀಣಾವಾದನದಲ್ಲೂ ವಿಜಯ –** ಉತ್ತರದೇಶದಿಂದ ಬಂದ ಸಂಗೀತ ವಿದ್ವಾಂಸರನ್ನು ವೀಣಾವಾದನದಲ್ಲಿ ತಮ್ಮ ಶಿಷ್ಯನ ಮೇಲೆ ಅನುಗ್ರಹಿಸಿ ಅವನಿಂದಲೇ ಅವರುಗಳು ಸೋಲುವಂತೆ ಮಾಡಿದರು.

**೧೮. ವಿಷಕುಡಿದು ವಿಜಯಿಗಳಾದರು –** ಒಮ್ಮೆ ಗಂಗಾಧರ ಶರ್ಮನೆಂಬುವನು ಶ್ರೀಗಳೊಂದಿಗೆ ವಾಗ್ವಾದ ಮಾಡಿ ಸೋತು, ಕೊನೆಗೆ ತಾನೇ ತಂದಿದ್ದ ವಿಷವನ್ನು ಕುಡಿದು ಜಯಿಸುವಂತೆ ಪರೀಕ್ಷೆಯೊಡ್ಡಿದನು. ಮತ್ತೆ ತನ್ನ ತಪ್ಪಿನ ಅರಿವಾಗಿ ಸ್ವಾಮಿಗಳಲ್ಲಿ ಅಪರಾಧವನ್ನು ಕ್ಷಮಿಸಿ ವಿಷಪ್ರಾಶನವನ್ನು ಬೇಡವೆಂದು ಕೋರಿದನು. ಆದರೆ ಶ್ರೀಗಳು ತಮ್ಮ ಪ್ರತಿಜ್ಞಾಭಂಗಕ್ಕೆ ಒಪ್ಪಲಿಲ್ಲ. ಶ್ರೀಗಳು ವಿಷವನ್ನು ಕುಡಿದು ಶ್ರೀಹರಿಯನ್ನು ಚಿಂತಿಸಹತ್ತಿದರು. ಅಷ್ಟರಲ್ಲಿ ಶ್ರೀಗಳ ದೇಹವೆಲ್ಲಾ ಕಪ್ಪಾಯಿತು. ಆದರೆ ಅವರ ಮುಖದಲ್ಲಿನ ಸಾತ್ವಿಕ ತೇಜಸ್ಸು ಮಾತ್ರ ಕಂಗೊಳಿಸುತ್ತಿತ್ತು. ಆಗಲೇ ಶ್ರೀಗಳವ ಕಂಠದಿಂದ ಹೊರಹೊಮ್ಮಿತ್ತು ನರಸಿಂಹನ ಸ್ತೋತ್ರ –

**ಭೋಖಂಡಂ ವಾರಣಾಂಡಂ ಪರವಿರಟಂ ಡಂಪಡಂಪೋರುಡಂಪಂ ।**
**ಡಿಂಡಿಂಡಿಂಡಿಂ ಡಿಡಿಂಬಂ ದಹಮಪಿವಹವ್ಮೈರ್ಝುರ್ಝಂಪೈಶ್ಚರ್ಝುಂಪೈ: ।..**

ಶ್ರೀಗಳು ಪೂಜಾ ಸಮಯದಲ್ಲಿ ಶ್ರಿ ನೃಸಿಂಹದೇವರ ಮುಖವಸ್ತ್ರವನ್ನು ಬಿಚ್ಚಿ ದೇವರನ್ನು ಕರದಲ್ಲಿ ಹಿಡಿದು ಕಣ್ತುಂಬ ನೋಡಿ ಧ್ಯಾನಿಸಿದರು. ಕೆಂಬಣ್ಣದಿಂದ ಕಂಗೊಳಿಸುತ್ತಿದ್ದ ಶ್ರೀನರಸಿಂಹದೇವರ ಕಂಠಪ್ರದೇಶ ಕಪ್ಪಾಗಿದೆ. ಹಿಂದಿನ ದಿನವೂ ರಕ್ತವರ್ಣದಿಂದ ದೇವರ ಕಂಠ ಕಪ್ಪಾಗಿದೆ। ಇಂದಿಗೂ ಕುಂಭಕೋಣದಲ್ಲಿರುವ ಶ್ರೀನೃಸಿಂಹದೇವರ ಕಂಠಪ್ರದೇಶ ವಿಷಪ್ರಾಶನದಿಂದ ಕಪ್ಪಾಗಿರುವುದನ್ನು ಯಾರು ಬೇಕಾದರೂ ವೀಕ್ಷಿಸಬಹುದು.

## ಶ್ರೀ ವಿಜಯೀಂದ್ರತೀರ್ಥಕೃತ ಗ್ರಂಥಗಳು –

### ಸೂತ್ರಪ್ರಸ್ಥಾನ ಗ್ರಂಥಗಳು

೧. ಓಂಕಾರವಾದಾರ್ಥ:
೨. ತತ್ತ್ವಮಾಣಿಕ್ಯಪೇಟಿಕಾ
೩. ಬ್ರಹ್ಮಸೂತ್ರಾಧಿಕರಣಮಾಲಾ
೪. ಬ್ರಹ್ಮಸೂತ್ರನ್ಯಾಯಸಂಗ್ರಹ:
೫. ಸೂತ್ರಾರ್ಥ ಸಂಗ್ರಹ:
೬. ಅನುವ್ಯಾಖ್ಯಾನ ಟಿಪ್ಪಣೀ
೭. ನ್ಯಾಯಸುಧ್ಯಾವ್ಯಾಖ್ಯಾ – ಬಿಂದು:
೮. ಅಣುಭಾಷ್ಯವ್ಯಾಖ್ಯಾ
೯. ನ್ಯಾಯವಿವರಣಟೀಕಾ
೧೦. ಅಧಿಕರಣರತ್ನಮಾಲಾ
೧೧. ನಯಪಂಚಕಮಾಲಾ
೧೨. ಮಧ್ವತಂತ್ರ ನಯಮಂಜರೀ
೧೩. ನ್ಯಾಯಮುಕುರ:
೧೪. ನ್ಯಾಯಮೌಕ್ತಿಕಮಾಲಾ

### ಶ್ರುತಿ, ಉಪನಿಷತ್ಪ್ರಸ್ಥಾನ ಗ್ರಂಥಗಳು

೧೫. ಋಗ್ಭಾಷ್ಯ ಟಿಪ್ಪಣಿ
೧೬. ಈಶಾವಾಸ್ಯೋಪನಿಷದ್ಭಾಷ್ಯ ಟೀಕೆಯ ಟಿಪ್ಪಣಿ
೧೭. ತೈತ್ತಿರೀಯೋಪನಿಷದ್ಭಾಷ್ಯ ವ್ಯಾಖ್ಯಾ
೧೮. ಕೇನೋಪನಿಷದ್ಭಾಷ್ಯ ವ್ಯಾಖ್ಯಾ
೧೯. ಐತರೇಯೋಪನಿಷದ್ಭಾಷ್ಯ ವ್ಯಾಖ್ಯಾ
೨೦. ಷಟ್ಪ್ರಶ್ನೋಪನಿಷದ್ಭಾಷ್ಯ ಟೀಕಾ ಟಿಪ್ಪಣಿ
೨೧. ಕಾಠಕೋಪನಿಷದ್ಭಾಷ್ಯ ವ್ಯಾಖ್ಯಾ
೨೨. ಮಾಂಡೂಕ್ಯೋಪನಿಷದ್ಭಾಷ್ಯ ವ್ಯಾಖ್ಯಾ

೨೩. ಮುಂಡಕೋಪನಿಷದ್ಭಾಷ್ಯ ವ್ಯಾಖ್ಯಾ

೨೪. ಛಾಂದೋಗ್ಯೋಪನಿಷದ್ಭಾಷ್ಯ ವ್ಯಾಖ್ಯಾ

೨೫. ಬೃಹದಾರಣ್ಯಕೋಪನಿಷದ್ಭಾಷ್ಯ ವ್ಯಾಖ್ಯಾ

೨೬. ಶ್ರುತಿತತ್ತ್ವಪ್ರಕಾಶಿಕಾ

೨೭. ಶ್ರುತ್ಯರ್ಥಸಾರ:

೨೮. ಶ್ರುತಿತಾತ್ಪರ್ಯಕೌಮುದೀ

೨೯. ದ್ವಾಸುಪರ್ಣಾ ಇತ್ಯಾದೀನಾಂ ಭೇದಪರತ್ವಸಮರ್ಥನಮ್

## ಗೀತಾಪ್ರಸ್ಥಾನ ಗ್ರಂಥಗಳು

೩೦. ಗೀತಾಕ್ಷರಾರ್ಥ:

೩೧. ಗೀತಾಭಾಷ್ಯಪ್ರಮೇಯದೀಪಿಕಾವ್ಯಾಖ್ಯಾ

೩೨. ಗೀತಾತಾತ್ಪರ್ಯ ನ್ಯಾಯದೀಪಿಕಾವ್ಯಾಖ್ಯಾನಮ್

## ಪ್ರಕರಣ ಗ್ರಂಥಗಳ ಟಿಪ್ಪಣಿಗಳು

೩೩. ಪ್ರಮಾಣಲಕ್ಷಣಟೀಕಾಟಿಪ್ಪಣಿ

೩೪. ಕಥಾಲಕ್ಷಣಟೀಕಾ ಟಿಪ್ಪಣಿ

೩೫. ತತ್ತ್ವಸಂಖ್ಯಾನ ಟೀಕಾ ಟಿಪ್ಪಣಿ

೩೬. ತತ್ತ್ವವಿವೇಕ ಟೀಕಾ ಟಿಪ್ಪಣಿ

೩೭. ಉಪಾಧಿಖಂಡನ ಟೀಕಾ ಟಿಪ್ಪಣಿ

೩೮. ಮಾಯಾವಾದ ಖಂಡನ ಟೀಕಾ ಟಿಪ್ಪಣಿ

೩೯. ಮಿಥ್ಯಾತ್ವಾನುಮಾನಖಂಡನಟೀಕಾ ಟಿಪ್ಪಣಿ

೪೦. ವಿಷ್ಣುತತ್ತ್ವನಿರ್ಣಯ ಟೀಕಾ ಟಿಪ್ಪಣಿ (ಗೂಢಭಾವಪ್ರಕಾಶ)

೪೧. ತತ್ತ್ವೋದ್ಯೋತಟೀಕಾಟಿಪ್ಪಣಿ

೪೨. ಕರ್ಮನಿರ್ಣಯ ಟೀಕಾ ಟಿಪ್ಪಣಿ

೪೩. ಪ್ರಮಾಣಪದ್ಧತಿವ್ಯಾಖ್ಯಾ

## ವ್ಯಾಸತ್ರಯ ಟಿಪ್ಪಣಿಗಳು

೪೪. ಯುಕ್ತಿರತ್ನಾಕರ (ತರ್ಕತಾಂಡವವ್ಯಾಖ್ಯಾ)
೪೫. ತಾತ್ಪರ್ಯಚಂದ್ರಿಕಾವ್ಯಾಖ್ಯಾ
೪೬. ತಾತ್ಪರ್ಯಚಂದ್ರಿಕಾಭೂಷಣಮ್
೪೭. ಚಂದ್ರಿಕೋದಾಹೃತನ್ಯಾಯಮಾಲಾ
೪೮. ತಾತ್ಪರ್ಯಚಂದ್ರಿಕಾಕುಚೋದ್ಯಕುಠಾರ:
೪೯. ನ್ಯಾಯಾಮೃತಾಮೋದ:
೫೦. ನ್ಯಾಯಾಮೃತಮಧ್ಯಮಾಮೋದ:
೫೧. ನ್ಯಾಯಾಮೃತಗುರ್ವಾಮೋದ:
೫೨. ನ್ಯಾಯಾಮೃತೋದಾಹೃತ ಜೈಮಿನೀನ್ಯಾಯಮಾಲಾ
೫೩. ನ್ಯಾಯಾಮೃತಕಂಟಕೋದ್ಧಾರ:

## ಸ್ವತಂತ್ರಗ್ರಂಥಗಳು

೫೪. ಪದಾರ್ಥಸಂಗ್ರಹ:
೫೫. ನಾರಾಯಣಶಬ್ದಾರ್ಥ ನಿರ್ವಚನಮ್
೫೬. ಚಕ್ರಮೀಮಾಂಸಾ
೫೭. ಪಂಚಸಂಸ್ಕಾರದೀಪಿಕಾ
೫೮. ಸಿದ್ಧಾಂತಸಾರಾಸಾರವಿವೇಚನಮ್
೫೯. ವಾಗ್ವೈಖರೀ
೬೦. ವಾದಮಾಲಿಕಾ
೬೧. ಮೀಮಾಂಸಾನನಯ ಕೌಮುದೀ
೬೨. ಪಿಷ್ಟಪಶುಮೀಮಾಂಸಾ
೬೩. ಭೇದಚಿಂತಾಮಣಿ:
೬೪. ಭೇದಪ್ರಭಾ
೬೫. ಭೇದಸಂಜೀವಿನೀ
೬೬. ಭೇದಾಗಮಸುಧಾಕರ:

೬೭. ಭೇದಕುಸುಮಾಂಜಲಿ:
೬೮. ಮಧ್ವಸಿದ್ಧಾಂತಸಾರೋದ್ಧಾರ:
೬೯. ವಿರೋಧೋದ್ಧಾರ:
೭೦. ವಿಷ್ಣುಪಾರಮ್ಯಮ್

<u>ಖಂಡನ ಗ್ರಂಥಗಳು</u>

೭೧. ಪರತತ್ತ್ವಪ್ರಕಾಶಿಕಾ
೭೨. ಸನ್ಮಾರ್ಗದೀಪಿಕಾ
೭೩. ಪ್ರಣವದರ್ಪಣ ಖಂಡನಮ್
೭೪. ಉಪಸಂಹಾರವಿಜಯ:
೭೫. ಅದ್ವೈತಶಿಕ್ಷಾ
೭೬. ಭೇದವಿದ್ಯಾವಿಲಾಸ
೭೭. ಭಟ್ಟೋಜಿಕುಟ್ಟನಮ್
೭೮. ಮಧ್ವತಂತ್ರಮುಖಭೂಷಣಮ್
೭೯. ಮಧ್ವಾಧ್ವ ಕಂಟಕೋದ್ಧಾರ:
೮೦. ಲಿಂಗಮೂಲಾನ್ವೇಷಣವಿಚಾರ:
೮೧. ಶೈವಸರ್ವಸ್ವ ಖಂಡನಮ್
೮೨. ಶ್ರವಣವಿಧಿವಿಲಾಸ:
೮೩. ಚಿತ್ರಮೀಮಾಂಸಾಖಂಡನಮ್
೮೪. ಅಪ್ಪಯ್ಯಕಪೋಲಚಪೇಟಿಕಾ
೮೫. ಕುಚೋದ್ಯಕುಠಾರ:
೮೬. ತುರೀಯಶಿವಖಂಡನಮ್
೮೭. ಆನಂದತಾರತಮ್ಯವಾದಾರ್ಥ:
೮೮. ಶ್ರೀನೃಸಿಂಹಾಷ್ಟಕಮ್(ಸ್ತೋತ್ರ)
೮೯. ವಿಷ್ಣುಸ್ತುತಿವ್ಯಾಖ್ಯಾನ (ಸ್ತೋತ್ರ)
೯೦. ದುರಿತಾಪಹಾರಸ್ತೋತ್ರಮ್ (ಸ್ತೋತ್ರ)

೯೧.	ಶ್ರೀಶ್ರೀಪಾದರಾಜಾಷ್ಟಕವ್(ಸ್ತೋತ್ರ)
೯೨.	ಶ್ರೀವ್ಯಾಸರಾಜಸ್ತೋತ್ರವ್(ಸ್ತೋತ್ರ)
೯೩.	ಶ್ರೀವ್ಯಾಸರಾಜವಿಜಯ (ಕಾವ್ಯ)
೯೪.	ಸುಭದ್ರಾಧನಂಜಯ: (ಕಾವ್ಯ)
೯೫.	ವ್ಯಾಸರಾಜಾಭ್ಯುದಯ (ನಾಟಕ)
೯೬.	ಉಭಯಗ್ರಸ್ತರಾಹೂದಯ: (ನಾಟಕ)
೯೭.	ನ್ಯಾಯಾಧ್ವದೀಪಿಕಾ
೯೮.	ಶ್ರೀರಾಮಾನುಜಮತರೀತ್ಯಾ ಸೂತ್ರಾರ್ಥ:
೯೯.	ಭೂಗೋಲಸಂಗ್ರಹ:
೧೦೦.	ಭಾಗವತ ಕಥಾಸಂಗ್ರಹ

# ಶ್ರೀನೃಸಿಂಹಾಷ್ಟಕವ್

ಭ್ರೋಖಂಡಂ ವಾರಣಾಂಡಂ ಪರವರವಿರಟಂ ಡಂಪಡಂಪ್ರೋರುಡಂಪಂ
ಡಿಂಡಿಂಡಿಂಡಿಂ ಡಿಡಿಂಬಂ ದಹಮಪಿವಹಮ್ಮೈರ್ಝರ್ಝಂಪರ್ಝುಂಪ್ಯೈಶ್ಚ ಝುಂಪ್ಯೈ:।
ತುಲ್ಯಾಸ್ತುಲ್ಯಾಸ್ತು ತುಲ್ಯಾ: ಧುಮಧುಮಧುಮಕೈ: ಕುಂಕುಮಾಂಕೈ: ಕುಮಾಂಕೈ:
ಏತತ್ತೇ ಪೂರ್ಣಯುಕ್ತಂ ಅಹರಹಕರಹ: ಪಾತು ಮಾಂ ನಾರಸಿಂಹ: । ೧ ।

ಭೂಭೃದ್ಭೂಭೃದ್ಭುಜಂಗಂ ಪ್ರಲಯರವರವಂ ಪ್ರಜ್ವಲದ್ಜ್ವಾಲಮಾಲಂ
ಖರ್ಜರ್ಜಂ ಖರ್ಜದುರ್ಜಂ ಖಖಚಖಚಖಚಿತ್ಖರ್ಜದುರ್ಜರ್ಜಯಂತಮ್ ।
ಭೂಭಾಗಂ ಭೋಗಭಾಗಂ ಗಗಗಗಗಗನಂ ಗರ್ದಮೃತ್ಯೂಗ್ರಗಂಡಂ
ಸ್ವಚ್ಚಂ ಪುಚ್ಚಂ ಸ್ವಗಚ್ಚಂ ಸ್ವಜನಜನನುತ: ಪಾತು ಮಾಂ ನಾರಸಿಂಹ: । ೨ ।

ಏನಾಗ್ರಂ ಗರ್ಜಮಾನಂ ಲಘುಲಘುಮಕರೋ ಬಾಲಚಂದ್ರಾರ್ಕದಂಷ್ಟ್ರೋ
ಹೇಮಾಂಭೋಜಂ ಸರೋಜಂ ಜಟಜಟಜಟಿಲೋ ಜಾಡ್ಯಮಾನಸ್ತುಭೀತಿ: ।
ದಂತಾನಾಂ ಬಾಧಮಾನಂ ಖಗಟಖಗಟವೋ ಭೋಜಜಾನು: ಸುರೇಂದ್ರೋ
ನಿಷ್ಕ್ರುತ್ಯೂಹಂ ಸ ರಾಜಾ ಗಹಗಹಗಹತ: ಪಾತು ಮಾಂ ನಾರಸಿಂಹ: । ೩ ।

ಶಂಖಂ ಚಕ್ರಂ ಚ ಚಾಪಂ ಪರಶುಮಶಮಿಷಂ ಶೂಲಪಾಶಾಂಕುಶಾಸ್ತ್ರಂ
ಬಿಭ್ರಂತಂ ವಜ್ರಖೇಟಂ ಹಲಮುಸಲಗದಾಕುಂತಮತ್ಯುಗ್ರದಂಷ್ಟ್ರಮ್ ।
ಜ್ವಾಲಾಕೇಶಂ ತ್ರಿನೇತ್ರಂ ಜ್ವಲದನಲನಿಭಂ ಹಾರಕೇಯೂರಭೂಷಂ
ವಂದೇ ಪ್ರತ್ಯೇಕರೂಪಂ ಪರಪದನಿವಸ: ಪಾತು ಮಾಂ ನಾರಸಿಂಹ: । ೪ ।


ಪಾದದ್ವಂದ್ವಂ ಧರಿತ್ರೀಕಟಿವಿಪುಲತರೋ ಮೇರುಮಧ್ಯೂರ್ಧ್ವಮೂರುಂ
ನಾಭಿಬ್ರಹ್ಮಾಂಡಸಿಂಧು: ಹೃದಯಮಪಿ ಭವೋ ಭೂತವಿದ್ವತ್ಸಮೇತ: ।
ದುಶ್ಚಕ್ರಾಂಕಂ ಸ್ವಬಾಹುಂ ಕುಲಿಶನಖಮುಖಂ ಚಂದ್ರಸೂರ್ಯಾಗ್ನಿನೇತ್ರಂ
ವಕ್ತ್ರಂ ವಹ್ನಿ ಸುವಿದ್ಯುತ್ಸುರಗಣವಿಜಯ: ಪಾತು ಮಾಂ ನಾರಸಿಂಹ: । ೫ ।

ನಾಸಾಗ್ರಂ ಪೀನಗಂಡಂ ಪರಬಲಮಥನಂ ಬದ್ಧಕೇಯೂರಹಾರಂ
ರೌದ್ರಂ ದಂಷ್ಟ್ರಾಕರಾಲಂ ಅಮಿತಗುಣಗಣಂ ಕೋಟಿಸೂರ್ಯಾಗ್ನಿನೇತ್ರಮ್ ।
ಗಾಂಭೀರ್ಯಂ ಪಿಂಗಲಾಕ್ಷಂ ಭ್ರುಕುಟಿತವಿಮುಖಂ ಷೋಡಶಾಧಾರ್ಧಬಾಹುಂ
ವಂದೇ ಭೀಮಾಟ್ಟಹಾಸಂ ತ್ರಿಭುವನವಿಜಯ: ಪಾತು ಮಾಂ ನಾರಸಿಂಹ: । ೬ ।

ಕೇ ಕೇ ನೃಸಿಂಹಾಷ್ಟಕೇ ನರವರಸದೃಶಂ ದೇವಭೀತ್ವಂ ಗೃಹೀತ್ವಾ
ದೇವಂದ್ಯೋ ವಿಪ್ರದಂದಂ ಪ್ರತಿವಚನಪಯಾಯಾಮ್ಯನಪ್ರತ್ಯನೈಷೀ: ।
ಶಾಪಂ ಚಾಪಂ ಖಡ್ಗಂ ಪ್ರಹಸಿತವದನಂ ಚಕ್ರಚಕ್ರೀಚಕೇನ
ಓಮಿತ್ಯೇ ದೈತ್ಯೇನಾದಂ ಪ್ರಕಚವಿವಿದುಷಾಂ ಪಾತು ಮಾಂ ನಾರಸಿಂಹ: । ೭ ।

ಝುಂಝುಂಝುಂಝುಂ ಝುಂಕಾರಂ ಝುಷಝುಷಝುಷಿತಂ ಜಾನುದೇಶಂಝುಕಾರಂ
ಹುಂ ಹುಂ ಹುಂ ಹುಂ ಹುಕಾರಂ ಹರಿತಕಹಹಸಾ ಯಂದಿಶೇ ವಂ ವಕಾರಮ್ ।
ವಂ ವಂ ವಂ ವಂ ವಕಾರಂ ವದನದಲಿತತಂ ವಾಮಪಕ್ಷಂ ಸುಪಕ್ಷಂ
ಲಂ ಲಂ ಲಂ ಲಂ ಲಕಾರಂ ಲಘುವಣವಿಜಯ: ಪಾತು ಮಾಂ ನಾರಸಿಂಹ: ।೮ ।
ಭೂತಪ್ರೇತಪಿಶಾಚಯಕ್ಷಗಣಶ: ದೇಶಾಂತರೋಚ್ಚಾಟನಾ–
ಚೋರವ್ಯಾಧಿಮಹಾಜ್ವರಂ ಭಯಹರಂ ಶತ್ರುಕ್ಷಯಂ ನಿಶ್ಚಯಮ್ ।
ಸಂಧ್ಯಾಕಾಲಜಪಂತಮಷ್ಟಕಮಿದಂ ಸದ್ಭಕ್ತಿಪೂರ್ವಾದಿಭಿ:
ಪ್ರಹ್ಲಾದೇವ ವರೋ ವರಸ್ತು ಜಯಿತಾ ಸತ್ಪೂಜಿತಾಂ ಭೂತಯೇ । ೯ ।

॥ ಇತಿ ಶ್ರೀ ವಿಜಯೀಂದ್ರ ಯತಿಕೃತಂ ಶ್ರೀನೃಸಿಂಹಾಷ್ಟಕಮ್ ॥




**(Source – Sri Vyasanakere Prabhanjanacharyaru-VIJAYENDRARU**

**& Sri Raja S Gururajachar on Vijayeendraru – AJAYYA VIJAYENDRARU)**

# ಕೃಷ್ಣಾರ್ಪಣಮಸ್ತು

**ಸಂಗ್ರಹ ಲೇಖನ – ನರಹರಿ ಸುಮಧ್ವ (9916904341)**
**For www.sumadhwaseva.com**
**Email ID : Naraharisumadhwa@yahoo.in**